
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ರಾಯಪುರದಲ್ಲಿ ಬುಧವಾರ ಆರ್‌ಸಿಬಿ ಹಾಗು ಕೆಕೆಆರ್ ನಡುವಿನ ಐಪಿಎಲ್ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿದ್ದು, 8.50ಕ್ಕೆ ಪಂದ್ಯ ಆರಂಭವಾಗಿದೆ...

14 ಮೇ 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 64 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಕದನ ಕುತೂಹಲ...! » 2



ಚಿನ್ನ-ಬೆಳ್ಳಿ ಮೇಲಿನ ಆಮದು ಸುಂಕ ಶೇ.15ಕ್ಕೇರಿಕೆ » 3



ಮೋದಿ ಮಿತವ್ಯಯ ಸಲಹೆಗೆ ಬಿಜೆಪಿ ಸ್ಪಂದನೆ » 4

# ಬೆಂಗಾವಲು ವಾಹನ ತಗ್ಗಿಸಿದ ಪ್ರಧಾನಿ

## ಇಂಧನ ಮಿತ ಬಳಕೆ: ಉತ್ತರ ಪ್ರದೇಶ, ಮಧ್ಯಪ್ರದೇಶ, ದೆಹಲಿ, ರಾಜಸ್ಥಾನ, ಬಿಹಾರ ಮುಖ್ಯಮಂತ್ರಿಗಳು ಪಾಲನೆ

• ಪ್ರಜೋದಯ ವರದಿ

**ನವದೆಹಲಿ:** ಇಂಧನ ಮಿತ ಬಳಕೆ, ಚಿನ್ನ ಖರೀದಿ ನಿಲ್ಲಿಸುವಂತೆ ದೇಶದ ಜನರಿಗೆ ಮನವಿ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರದಿಂದ ತಮ್ಮ ಬೆಂಗಾವಲು ವಾಹನಗಳನ್ನು ಕಡಿತಗೊಳಿಸಿದ್ದಾರೆ. ಪ್ರಧಾನಿ ಹಾದಿಯಲ್ಲೇ ಸಾಗಿರುವ ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು, ಇತರೆ ನಾಯಕರು ಇಂಧನ ಮಿತವ್ಯಯಕ್ಕೆ ಮುಂದಾಗಿದ್ದಾರೆ.

ಪ್ರಧಾನಿ ಸೂಚನೆಯ ಮೇರೆಗೆ ಭದ್ರತೆಗೆ ಸಂಬಂಧಿಸಿದಂತೆ ಎಸ್‌ಪಿಜಿ ಘಟಕವು ಬ್ಲೂ ಬುಕ್ ನಿಯಮಾವಳಿಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲಾಗಿದೆ. ಪ್ರಧಾನಿ ಮೋದಿ ತಮ್ಮ ಬೆಂಗಾವಲು ಪಡೆಗೆ ಎಲೆಕ್ಟ್ರಿಕ್ ವಾಹನಗಳನ್ನು ಬಳಸುವಂತೆಯೂ



ಸೂಚಿಸಿದ್ದಾರೆ. ಅಲ್ಲದೇ ಇದಕ್ಕಾಗಿ ಯಾವುದೇ ಹೊಸ ವಾಹನ ಖರೀದಿ ಮಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದು ಹೇಳಲಾಗಿದೆ. ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶ, ಮಧ್ಯಪ್ರದೇಶ, ದೆಹಲಿ, ರಾಜಸ್ಥಾನ ಮುಖ್ಯಮಂತ್ರಿಗಳೂ ಕೂಡ, ತಮ್ಮ ಬೆಂಗಾವಲು ಪಡೆ ವಾಹನಗಳ ಸಂಖ್ಯೆಯನ್ನು ಗಣನೀಯವಾಗಿ ತಗ್ಗಿಸಿದ್ದಾರೆ.

ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ತಮ್ಮ ಬೆಂಗಾವಲು ಪಡೆಯ ವಾಹನಗಳ ಸಂಖ್ಯೆಯನ್ನು ಕನಿಷ್ಠ ಮಟ್ಟಕ್ಕೆ ಇಳಿಸುವುದಾಗಿ ಘೋಷಿಸಿದ್ದು, ಇತರೆ ಸಚಿವರಿಗೂ ಇದೇ ಹಾದಿ ತುಳಿಯಲು ಮನವಿ ಮಾಡಿದ್ದಾರೆ. ಸಾಮಾನ್ಯ ಜನರು ಸಾರ್ವಜನಿಕ ಸಾರಿಗೆ ಬಳಸುವಂತೆಯೂ ಕೇಳಿಕೊಂಡಿದ್ದಾರೆ.

ದೆಹಲಿಯ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಅಧಿಕೃತ ಕೆಲಸಗಳಿಗೆ ಕನಿಷ್ಠ ವಾಹನ ಬಳಸುವುದಾಗಿ ತಿಳಿಸಿದ್ದಾರೆ. ತಮ್ಮನ್ನೂ ಒಳಗೊಂಡಂತೆ ದೆಹಲಿಯ ಎಲ್ಲಾ ಬಿಜೆಪಿ ಶಾಸಕರು ಮತ್ತು ಅಧಿಕಾರಿಗಳು ಕಾರ್-ಪೂಲಿಂಗ್ (ವಾಹನ ಹಂಚಿಕೆ) ಮತ್ತು ಸಾರ್ವಜನಿಕ ಸಾರಿಗೆಗೆ ಆದ್ಯತೆ ನೀಡಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಜೊತೆಗೆ ಪ್ರಧಾನಿ ಸಲಹೆ ಪಾಲಿಸುವಂತೆ ಸಾರ್ವಜನಿಕರಿಗೂ ಅವರು ಮನವಿ ಮಾಡಿದ್ದಾರೆ.

ರಾಜಸ್ಥಾನ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಅವರು ಭದ್ರತೆಯ ಹೆಸರಿನಲ್ಲಿ ಬಳಸುವ ಅನಗತ್ಯ ವಾಹನಗಳನ್ನು ನಿಲ್ಲಿಸಲು ಸೂಚಿಸಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸೇರಿ ಎಲ್ಲಾ ಅಧಿಕಾರಿಗಳಿಗೆ ಈ ನಿಯಮ ಅನ್ವಯ ವಾಗಲಿದೆ. ಮಹಾರಾಷ್ಟ್ರದಲ್ಲಿ ಸರ್ಕಾರಿ ವಿಮಾನ ಮತ್ತು ಹೆಲಿಕಾಪ್ಟರ್ ಬಳಕೆಗೆ ಬ್ರೇಕ್ ಹಾಕಲಾಗಿದೆ. ಸಚಿವರು ತುರ್ತು ಕೆಲಸಗಳಿಗಾಗಿ ವಿಮಾನ ಬಳಸಬೇಕಿದ್ದರೆ ಮುಖ್ಯ ಮಂತ್ರಿ ದೇವೇಂದ್ರ ಫಡಣವಿಸ್ ಅವರ ಕಚೇರಿಯಿಂದ ಪೂರ್ವಾನು ಮತಿ ಪಡೆಯುವುದನ್ನು ಕಡ್ಡಾಯ ಗೊಳಿಸಲಾಗಿದೆ.

ಬಿಹಾರ ಉಪಮುಖ್ಯಮಂತ್ರಿ ವಿಜಯ್ ಕುಮಾರ್ ಚೌಧರಿ ಅವರು ತಮ್ಮ ವೈಯಕ್ತಿಕ ಬಳಕೆಯ ವಾಹನಗಳ ಸಂಖ್ಯೆಯನ್ನು ಅರ್ಧದಷ್ಟು ಕಡಿತಗೊಳಿಸಿದ್ದು, ಅತ್ಯಗತ್ಯವಿದ್ದಾಗ ಮಾತ್ರ ಅಧಿಕೃತ ಪ್ರವಾಸ ಕೈಗೊಳ್ಳುವುದಾಗಿ ಘೋಷಿಸಿದ್ದಾರೆ.

» ನಾಲ್ಕನೇ ಪುಟದಲ್ಲಿ

### ಯುಪಿಯಲ್ಲಿ ಶೇ.50 ವಾಹನ ಸಂಖ್ಯೆ ಕಡಿತ

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ತಮ್ಮ ಹಾಗು ಸಚಿವರ ವಾಹನಗಳ ಸಂಖ್ಯೆಯಲ್ಲಿ ತಕ್ಷಣವೇ ಶೇ.50 ರಷ್ಟು ಕಡಿತ ಮಾಡುವಂತೆ ಆದೇಶಿಸಿದ್ದಾರೆ. ಅಲ್ಲದೆ, ಸಚಿವರು ಮತ್ತು ಶಾಸಕರು ವಾರಕ್ಕೊಮ್ಮೆ ಕಡ್ಡಾಯವಾಗಿ ಸಾರ್ವಜನಿಕ ಸಾರಿಗೆಯನ್ನು ಬಳಸುವಂತೆ ಸೂಚಿಸಿದ್ದಾರೆ. ರಾಜ್ಯದಲ್ಲಿ ವರ್ಕ್ ಫ್ರಂ ಹೋಮ್ ವ್ಯವಸ್ಥೆಗೆ ಉತ್ತೇಜನ ಕೊಡಲು ಮತ್ತು ಹೆಚ್ಚು ಸಿಬ್ಬಂದಿ ಇರುವ ಸಂಸ್ಥೆಗಳಲ್ಲಿ ವಾರಕ್ಕೆ ಎರಡು ದಿನ ವರ್ಕ್‌ಫ್ರಂ ಹೋಂ ಮಾಡಲು ಶಿಫಾರಸ್ಸು ಮಾಡುವಂತೆ ತಿಳಿಸಿದ್ದಾರೆ.

# ಶುಭಂ ಶುಕ್ಲಾ ಜಿಲ್ಲಾ ಪಂಚಾಯಿತಿ ನೂತನ ಸಿಇಒ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಅವರು ವರ್ಗಾವಣೆಗೊಂಡು ಅವರ ಸ್ಥಾನಕ್ಕೆ ಶುಭಂಶುಕ್ಲಾ ಅವರು ನಿಯೋಜನೆಗೊಂಡಿದ್ದಾರೆ.

2022ರ ಬ್ಯಾಚ್‌ನ ಕರ್ನಾಟಕ ಕೇಡರ್ ಐಎಎಸ್ ಅಧಿಕಾರಿಯಾಗಿರುವ ಶುಭಂ ಶುಕ್ಲಾ ಅವರು ಈ ಮೊದಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಕಾರ್ಯದರ್ಶಿ, ನಂತರ ಹಾವೇರಿ ಜಿಲ್ಲೆ ಸವಣೂರಿನಲ್ಲಿ ಹಿರಿಯ ಉಪ ವಿಭಾಗಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಈಗ ಹಾಸನ ಜಿಲ್ಲಾ ಪಂಚಾಯಿತಿ ಸಿಇಒ ಆಗಿ ನೇಮಕಗೊಂಡಿದ್ದಾರೆ. ಮೂಲತಃ ಮಧ್ಯ ಪ್ರದೇಶದ ರೇವಾ ಜಿಲ್ಲೆಯವರಾದ ಅವರು 2021 ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ 43ನೇ ರ್‍ಯಾಂಕ್ ಪಡೆದಿದ್ದಾರೆ.

ವಿಶೇಷವೆಂದರೆ ಶುಭಂ ಶುಕ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರ ಪತಿ. ಕಳೆದ ಜ.1 ರಿಂದ ಶುಭನ್ವಿತಾ ಅವರು ಎಸ್‌ಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದೀಗ ಜಿಲ್ಲಾ ಪಂಚಾಯಿತಿಗೆ ಅವರ ಪತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಆಗಮಿಸಿದ್ದಾರೆ. ಐಎಎಸ್ ಪತಿ, ಐಪಿಎಸ್ ಪತ್ನಿ ಜಿಲ್ಲೆಯಲ್ಲಿ ಒಟ್ಟಿಗೇ ಸೇವೆ ಸಲ್ಲಿಸುತ್ತಿರುವುದು ಇದೇ ಮೊದಲಾಗಿದೆ.

ಒಂದೇ ಜಿಲ್ಲೆಯಲ್ಲಿ ಪತಿ ಪಂಚಾಯತ್ ರಾಜ್ ಆಡಳಿತ ವ್ಯವಸ್ಥೆ ನಿರ್ವಹಣೆ ಜವಾಬ್ದಾರಿ ಹೊತ್ತು ಕೊಂಡರೇ, ಪತ್ನಿ ಕಾನೂನು ಸುವ್ಯವಸ್ಥೆ ನಿರ್ವಹಣೆ ಹೊಣೆ ಹೊತ್ತಿರುವುದು ವಿಶೇಷ.



# ಜಿಮ್‌ನಲ್ಲಿ ಕ್ಷುಲ್ಲಕ ಕಾರಣಕ್ಕೆ ಹಲ್ಲೆ



• ಪ್ರಜೋದಯ ವರದಿ

**ಹಾಸನ:** ಜಿಮ್‌ನಲ್ಲಿ ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಯೊಬ್ಬ ಯುವಕನ ಮುಖ ಭಾಗಕ್ಕೆ ಬಲವಾಗಿ ಹೊಡೆದು ಹಲ್ಲೆ ಮಾಡಿರುವ ಘಟನೆ ಎಂಜೆ ಫಿಟ್ನೆಸ್‌ನಲ್ಲಿ ನಡೆದಿದೆ. ಮೂಲತಃ ಶಿವಮೊಗ್ಗಾದ ಕೀರ್ತನ್ ಗಾಯಾಳು. ವರುಣ್ ಹಲ್ಲೆ ನಡೆಸಿದ ಆರೋಪಿ.

ವರುಣ್ ಎಂಬಾತ ಎಂದಿನಂತೆ ಜಿಮ್‌ನಲ್ಲಿ ವರ್ಕ್‌ಔಟ್ ಮಾಡುತ್ತಿದ್ದ. ಈ ವೇಳೆ ಕೀರ್ತನ್ ಎಂಬ ಯುವಕನ ದೇಹ ವರುಣ್ ಭುಜಕ್ಕೆ ತಾಗಿದೆ. ಇಷ್ಟಕ್ಕೇ ಕೋಪಗೊಂಡ ವರುಣ್, ಯುವಕನ ಮೇಲೆ ರೇಗಾಡಿದ್ದಾನೆ. ಮಾತಿಗೆ ಮಾತು ಬೆಳೆದು ವರುಣ್, ಯುವಕನ ಮುಖ ಭಾಗಕ್ಕೆ ಬಲವಾಗಿ ಹೊಡೆದಿದ್ದಾನೆ. ಒಂದೇ ಪೆಟ್ಟಿಗೆ ಕೀರ್ತನ್ ಪ್ರಜ್ಞೆ ತಪ್ಪಿ ಕುಸಿದು ಬಿದ್ದಿದ್ದಾನೆ. ಕೂಡಲೇ ಆತನನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಕ್ರಮೇಣ ಚೇತರಿಸಿಕೊಳ್ಳುತ್ತಿದ್ದಾನೆ.

ಕೀರ್ತನ್ ಮೂಲತಃ ಶಿವಮೊಗ್ಗಾದವನಾಗಿದ್ದು, ಪ್ರಸ್ತುತ ನಗರದ ಬಿಟ್ಟಗೌಡನಹಳ್ಳಿಯಲ್ಲಿ ವಾಸವಾಗಿದ್ದರು. ಬೆಂಗಳೂರಿನ ಲ್ಯಾಮ್ ರಿಸರ್ಚ್ ಸೆಂಟರ್‌ನಲ್ಲಿ ಕಳೆದ ಐದು ವರ್ಷಗಳಿಂದ ಇಂಜಿನೀಯರ್ ಆಗಿರುವ ಇವರು, ವಾರಕ್ಕೆ ಮೂರು ದಿನ ವರ್ಕ್ ಫ್ರಂ ಹೋಂ ರೀತಿ ಕೆಲಸ ಮಾಡಿಕೊಂಡಿದ್ದರು. ಈ ಕುರಿತು ಮಾಹಿತಿ ನೀಡಿದ ಜನಪ್ರಿಯ ಆಸ್ಪತ್ರೆ ವೈದ್ಯ ಡಾ.ಅಬ್ದುಲ್ ಬಷೀರ್, ಯುವಕ ಆಸ್ಪತ್ರೆಗೆ ಬಂದಾಗ ಪ್ರಜ್ಞೆ ಇರಲಿಲ್ಲ, ಈಗ ಪ್ರಜ್ಞೆ ಬಂದಿದೆ. ಬಲವಾದ ಹೊಡೆತದಿಂದ ಮುಖದ ಹಲವು ಮೂಳೆಗಳು ಮುರಿದಿವೆ. ಆಪರೇಷನ್ ಮಾಡಬೇಕಿದೆ ಎಂದು ತಿಳಿಸಿದ್ದಾರೆ. ಹಲ್ಲೆ ನಡೆಸಿದ ದೃಶ್ಯಾವಳಿ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜಿಲ್ಲೆಗೆ 15 ಕರ್ನಾಟಕ ಪಬ್ಲಿಕ್ ಶಾಲೆಗಳ ಮಂಜೂರು

## ಪ್ರಸಕ್ತ ಸಾಲಿನಿಂದ ಕಾರ್ಯಾರಂಭ ಸಾಧ್ಯತೆ | 30ಕ್ಕೆ ಏರಿದ ಕೆಪಿಎಸ್ ಶಾಲೆಗಳ ಸಂಖ್ಯೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಖಾಸಗಿ ಶಾಲೆಗಳ ವ್ಯಾಮೋಹದಿಂದ ಮಕ್ಕಳು ಹಾಗು ಪೋಷಕರನ್ನು ಹೊರತರುವ ಉದ್ದೇಶದಿಂದ ಜಾರಿಯಾದ ಕೆಪಿಎಸ್ ಶಾಲೆಗೆ ಜಿಲ್ಲೆಯಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಹೆಚ್ಚುವರಿಯಾಗಿ 15 ಶಾಲೆಗಳು ಆರಂಭವಾಗುವ ನಿರೀಕ್ಷೆ ಮೂಡಿದೆ.

ಜಿಲ್ಲೆಯಲ್ಲಿ ಈಗಾಗಲೇ 15 ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. 2025-26ನೇ ಸಾಲಿನ ಬಜೆಟ್ ಘೋಷಣೆಯಂತೆ 2026-27ನೇ ಸಾಲಿಗೆ ರಾಜ್ಯದ ಆಯ್ದ 500 ಸರ್ಕಾರಿ ಶಾಲೆಗಳನ್ನು ರಾಜ್ಯ ಆಯವ್ಯಯದ ಅನುದಾನ ಮತ್ತು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಸಾಲ ಯೋಜನೆಯಡಿ ಹೆಚ್ಚುವರಿ ಮೂಲಸೌಕರ್ಯ ಒದಗಿಸುವ ಸಂಬಂಧ ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ 474 ಶಾಲೆಗಳನ್ನು ಉನ್ನತೀಕರಿಸಲು 2025ರ ಅ.15ರ ಆದೇಶದಂತೆ ಸರ್ಕಾರ ಕ್ರಮ ಕೈಗೊಂಡಿದ್ದು, ಜಿಲ್ಲೆಯಲ್ಲಿ 15 ಶಾಲೆಗಳನ್ನು ಉನ್ನತೀಕರಿಸಲು ಕ್ರಮ ಕೈಗೊಳ್ಳಲಾಗಿದೆ.

### ಕೆಪಿಎಸ್ ಶಾಲೆಗೆ ಮಾನದಂಡ

ರಾಜ್ಯದ ಎಲ್ಲಿಯೇ ಕೆಪಿಎಸ್ ಶಾಲೆ ಪ್ರಾರಂಭಿಸಬೇಕೆಂದರೆ ಶಿಕ್ಷಣ ಇಲಾಖೆ ಕೆಲವು ಮಾನದಂಡಗಳನ್ನು ಹಾಕಿದೆ. ಸರ್ಕಾರಿ ಶಾಲೆಯಾಗಿರಬೇಕು, ಒಂದೇ ಆವರಣದಲ್ಲಿ ಎಲ್‌ಕೆಜಿಯಿಂದ 12ನೇ ತರಗತಿ ವರೆಗೆ ಬೋಧನೆಗೆ ಅವಕಾಶವಿರಬೇಕು. ಸುಮಾರು 500 ಮೀಟರ್ ಅಂತರದಲ್ಲಿರುವ ಶಾಲೆಗಳನ್ನು ಪರಿಗಣಿಸುವುದು. ಒಟ್ಟು ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ 200 ಅಥವಾ ಅದಕ್ಕಿಂತ ಹೆಚ್ಚಿರಬೇಕು. ಶಾಲೆಯ ಹೆಸರಿನಲ್ಲಿ 3 ರಿಂದ 5 ಎಕರೆ ಜಾಗ ಹೊಂದಿರಬೇಕು. ಈ ಎಲ್ಲಾ ಅರ್ಹತೆಗಳನ್ನು ಒಳಗೊಂಡ 15 ಶಾಲೆಗಳ ಹೆಸರನ್ನು ಶಿಕ್ಷಣ ಇಲಾಖೆ ಸರ್ಕಾರಕ್ಕೆ ಸಲ್ಲಿಸಿದೆ.





### ಮಂಜೂರಾದ ಶಾಲೆಗಳ ಮಾಹಿತಿ

ಆಲೂರು ತಾಲ್ಲೂಕಿನ ಕಾಮತಿ ಕೂಡಿಗೆ ಸರ್ಕಾರಿ ಪ್ರೌಢಶಾಲೆ (144 ಮಕ್ಕಳ ಸಂಖ್ಯೆ), ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ (607), ಬೆಳವಾಡಿ ಹಿರಿಯ ಪ್ರಾಥಮಿಕ ಶಾಲೆ (229), ಅರಸೀಕೆರೆಯ ಕುರುವಂಕ ಸರ್ಕಾರಿ ಪ್ರೌಢ ಶಾಲೆ (122), ಬಾಣಾವರ ಸರ್ಕಾರಿ ಪದವಿ ಪೂರ್ವ ಕಾಲೇಜು (200), ಡಿ.ಎಂ. ಕುರ್ಕೆ ಸರ್ಕಾರಿ ಪದವಿ ಪೂರ್ವ ಕಾಲೇಜು (195), ಜಾವಗಲ್ ಪದವಿ ಪೂರ್ವ ಕಾಲೇಜು (673) ಮತ್ತು ಬೇಲೂರು ತಾಲ್ಲೂಕಿನ ಅರೇಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು (441), ಚನ್ನರಾಯಪಟ್ಟಣದ ಬಾಗೂರು ಸರ್ಕಾರಿ ಪ್ರೌಢಶಾಲೆ (176), ಶ್ರವಣಬೆಳಗೊಳ ಕಾಲೇಜು (298), ಹಾಸನ ತಾಲ್ಲೂಕಿನ ನಿಟ್ಟೂರು (422), ಚಿಕ್ಕನಾಳು ಸರ್ಕಾರಿ ಪ್ರೌಢಶಾಲೆ (259), ಗೊರೂರು ಸರ್ಕಾರಿ ಪದವಿ ಪೂರ್ವ ಕಾಲೇಜು (249), ಹೊಳೆನರಸೀಪುರ ತಾಲ್ಲೂಕಿನ ಪಡುವಲಹಿಪ್ಪೆ (456) ಹಾಗು ಮೂಡಲಹಿಪ್ಪೆ ಸರ್ಕಾರಿ ಪದವಿ ಪೂರ್ವ ಕಾಲೇಜು (238) ಸೇರಿ 4709 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಕೆಪಿಎಸ್ ಶಾಲೆ ಪ್ರಾರಂಭಿಸಲು ವಿದ್ಯಾರ್ಥಿಗಳ ಸಂಖ್ಯೆ ಕನಿಷ್ಟ 200 ಇರಬೇಕೆಂಬ ನಿಯಮ ಇರುವುದರಿಂದ ಕಡಿಮೆ ದಾಖಲಾತಿ ಇರುವ ಪಕ್ಕದ ಶಾಲೆಗಳನ್ನು ವಿಲೀನಗೊಳಿಸಲು ನಿರ್ಧರಿಸಲಾಗಿದೆ.

### ಕಾರ್ಯನಿರ್ವಹಿಸುತ್ತಿರುವ ಕೆಪಿಎಸ್‌ಗಳು

ಪ್ರಸ್ತುತ ಆಲೂರು ತಾಲ್ಲೂಕಿನ ರಾಯರಕೊಪ್ಪಲು, ಅರಕಲಗೂಡಿನ ಬಸವಾಪಟ್ಟಣ, ಅರಸೀಕೆರೆಯ ಚಿಂದೇನಹಳ್ಳಿ ಗೇಟ್, ಬೇಲೂರಿನ ಹಳೇಬೀಡು, ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಹಾಗು ಉದಯಪುರ, ಹಾಸನ ತಾಲ್ಲೂಕಿನ ಮೊಸಳೆ ಹೊಸಹಳ್ಳಿ, ಸೋಮಹಳ್ಳಿ ಹಾಗು ಶಾಂತಿಗ್ರಾಮ, ಹೊಳೆನರಸೀಪುರದ ಹರಿಹರಪುರ, ಬಾಲಕರ ಶಾಲೆ ಹೊಳೆನರಸೀಪುರ, ಬಾಲಕಿಯರ ಶಾಲೆ, ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹಾಗು ಹಾನುಬಾಳುವಿನಲ್ಲಿ ಕೆಪಿಎಸ್ ಪ್ರಾರಂಭವಾಗಿದ್ದು ಒಟ್ಟು 6444 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

### ವಿರೋಧದ ನಡುವೆಯೂ ಶಾಲೆಗಳ ವಿಲೀನ

ಸರ್ಕಾರಿ ಶಾಲೆಗಳ ಉಳಿಸಬೇಕೆಂದರೆ ಶಿಕ್ಷಣ ತಜ್ಞರು, ವಿದ್ಯಾರ್ಥಿ ಸಂಘಟನೆಗಳು ರಾಜ್ಯಾದ್ಯಂತ ಹೋರಾಟ ನಡೆಸುತ್ತಿದ್ದರೂ ಸರ್ಕಾರ ಕೆಪಿಎಸ್ ಶಾಲೆಗಳ ಮೂಲಕ ಕಡಿಮೆ ದಾಖಲಾತಿ ಇರುವ ಶಾಲೆಗಳ ವಿಲೀನಕ್ಕೆ ಮುಂದಾಗಿದೆ. ಕೆಪಿಎಸ್ ಶಾಲೆ ಎಂದರೆ ಇಂಗ್ಲೀಷ್ ಮಾಧ್ಯಮದ ಜೊತೆಗೆ ದ್ವಿತೀಯ ಪಿಯುವರೆಗೆ ಮಕ್ಕಳ ವ್ಯಾಸಂಗಕ್ಕೆ ಕೊರತೆಯಾಗುವುದಿಲ್ಲ ಎಂಬ ಆಶಾಭಾವ ಪೋಷಕರದ್ದಾಗಿದೆ. ಜನ ಪ್ರತಿನಿಧಿಗಳು ಸಹ ಕೆಪಿಎಸ್ ಶಾಲೆಗಳನ್ನು ಸ್ವಾಗತಿಸಿರುವುದರಿಂದ ಕಡಿಮೆ ದಾಖಲಾತಿ ಹೊಂದಿರುವ ಶಾಲೆಗಳು ಮುಚ್ಚುವುದು ಅನಿವಾರ್ಯವಾಗಿದೆ.

# ಬೇಲೂರು-ಸಕಲೇಶಪುರ ಭಾಗದಲ್ಲಿ 25ಕ್ಕೂ ಹೆಚ್ಚು ಕಾಡಾನೆಗಳ ಸಂಚಾರ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಮುಂದುವರೆದಿದ್ದು, ಬುಧವಾರ ಬೆಳ್ಳಂಬೆಳಿಗ್ಗೆ 25ಕ್ಕೂ ಹೆಚ್ಚು ಕಾಡಾನೆಗಳು ಒಂದು ಕಾಫಿ ತೋಟದಿಂದ ಮತ್ತೊಂದು ಕಾಫಿ ತೋಟಕ್ಕೆ ಹಾದು ಹೋಗಿರುವ ಘಟನೆ ಬೇಲೂರು ತಾಲ್ಲೂಕಿನ ಕೋರಲಗದ್ದೆ ನಾರ್ವೆ ಮಾರ್ಗದಲ್ಲಿ ನಡೆದಿದೆ.

ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ಗಜಪಡೆ ಸಾಗಿದ್ದು, ಕಾಡಾನೆ ಹಾವಳಿಯಿಂದ ಅಪಾರ ಪ್ರಮಾಣದ ಬೆಳೆ ನಾಶವಾಗಿದೆ. ಕಾಡಾನೆಗಳ ಹಿಂಡು ರಸ್ತೆ ದಾಟುವ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿದೆ. ಕಾಡಾನೆಗಳ ಸಂಚಾರದ ಬಗ್ಗೆ ಅರಣ್ಯ ಇಲಾಖೆ ಇಟಿಎಫ್ ಸಿಬ್ಬಂದಿ ಮಾಹಿತಿ ನೀಡುತ್ತಿದ್ದಾರೆ. ಕಾಫಿ ತೋಟದಲ್ಲೇ ಗಜಪಡೆ ಬೀಡು ಬಿಟ್ಟಿದ್ದು ಸ್ಥಳೀಯರಲ್ಲಿ ಆತಂಕ ಸೃಷ್ಟಿ ಮಾಡಿವೆ.

ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಕಾಡಾನೆಗಳ ಚಲನವಲನದ ಮೇಲೆ ನಿಗಾ ವಹಿಸಬೇಕು. ಜೊತೆಗೆ ಗ್ರಾಮಸ್ಥರಿಗೆ ಮುನ್ನೆಚ್ಚರಿಕೆ ಸೂಚನೆ ನೀಡುವ ಕೆಲಸ ತುರ್ತಾಗಿ ನಡೆಯಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಅರೇಹಳ್ಳಿ ಭಾಗದಲ್ಲಿ ಕಾಡಾನೆಗಳ ಸಂಚಾರ ಹೆಚ್ಚಾಗುತ್ತಿರುವು ಜನರ ಆಕ್ರೋಶಕ್ಕೆ ಕಾರಣವಾಗಿದೆ.



ಅಪಾರ ಪ್ರಮಾಣದ ಬೆಳೆ ನಾಶ

### ಎಲ್ಲೆಲ್ಲಿ ಕಾಡಾನೆ ಸಂಚಾರ

ಬೇಲೂರು ತಾಲ್ಲೂಕಿನ ಹೆಗ್ಗದ್ದೆ ಎಸ್ಟೇಟ್ ಕೊರ್ಲಗದ್ದೆ ಸಮೀಪದ ಸಾಲ್ಡಾನ್ ಎಸ್ಟೇಟ್ ಮತ್ತು ಗುಂಡಪ್ಪ ರಾಜ್ ಗೋಪಾಲ ರಾಜ್ ತೋಟ ಗುಜ್ಜನಹಳ್ಳಿ, ಕುಶಾಲ್ ಗೌಡರ ತೋಟ ಮತ್ತು ಮಲ್ಲಿಕ್ ಗೌಡರ ತೋಟ ಮತ್ತು ನಾಗೇಶ್ ಗೌಡರ ತೋಟ ಅನುಘಟ್ಟ, ಟಾಟಾ ಎಸ್ಟೇಟ್ ಮಲಸಾವರ ಮತ್ತು ದಾಸನಗುಡ್ಡ, ಬ್ಯಾದನೆ ಗ್ರಾಮದ ಅಣ್ಣಾಮಲೈ ಎಸ್ಟೇಟ್ ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡಿವೆ.

ಸಕಲೇಶಪುರ ತಾಲ್ಲೂಕಿನ ವಡೂರು ಫಾರೆಸ್ಟ್, ಹೆತ್ತೂರು ಮತ್ತು ಯಸಳೂರು ಹೋಬಳಿಯ ಮರ್ಕಳ್ಳಿ ಗ್ರಾಮದ ಕಲ್ಲುತೋಟ, ಕಿರ್ಕಳ್ಳಿ ಗ್ರಾಮದ ಹಂಚ್ ಹನಲ್, ಹೊಂಗಡಹಳ್ಳ ಗ್ರಾಮದ ಕಾಡು

» ನಾಲ್ಕನೇ ಪುಟದಲ್ಲಿ

# ಕೇರಳ ಗೊಂದಲ ಬಗೆಹರಿದ ಬಳಿಕ ರಾಜ್ಯದತ್ತ ಗಮನ

• ಪ್ರಜೋದಯ ವರದಿ

**ಬೆಂಗಳೂರು:** ಕೇರಳದಲ್ಲಿ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಂಗ್ರೆಸ್ ಹೈಕಮಾಂಡ್ ಶೀಘ್ರದಲ್ಲೇ ರಾಜ್ಯದತ್ತ ಗಮನ ಹರಿಸಲಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಯಾಬಿನೆಟ್ ಪುನಾರಚನೆ ಬಗ್ಗೆ ತೀರ್ಮಾನಿಸಲು ತಿಂಗಳ ಅಂತ್ಯದವರಗೆ ಸಮಯವಿದೆ. ಮೊದಲು ಕೇರಳ ಮುಖ್ಯಮಂತ್ರಿ ವಿಚಾರ ಇತ್ಯರ್ಥ ಆಗಬೇಕೆಂದರು.

# ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ 5.25 ಲ.ರೂ. ದಂಡ

• ಪ್ರಜೋದಯ ವರದಿ

- ನ್ಯೂಮೋನಿಯಾ ಸಾವಿಗೆ ಹೃದಯಾಘಾತ ಕಾರಣ
- ಗ್ರಾಹಕರ ಆಯೋಗದಿಂದ ಆದೇಶ

**ಹಾಸನ:** ಚಿಕಿತ್ಸೆ ಸಂದರ್ಭದಲ್ಲಿ ನಿರ್ಲಕ್ಷ್ಯ ತೋರಿದ ಪರಿಣಾಮ ವ್ಯಕ್ತಿ ಸಾವಿಗೆ ಕಾರಣರಾಗಿದ್ದಾರೆಂದು ಆರೋಪಿಸಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ 5.25 ಲಕ್ಷ ರೂ. ದಂಡ ವಿಧಿಸಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶಿಸಿದೆ.

ನಗರದ ಹೆಚ್.ಎಲ್.ಭವಾನಿ ಅವರು ತಮ್ಮ ಪತಿ ಹೆಚ್.ಬಿ.ರಾಜು ಅವರ ಸಾವಿಗೆ ವೈದ್ಯರೇ ಕಾರಣರೆಂದು ಆರೋಪಿಸಿ ನಷ್ಟ ಪರಿಹಾರ ಕೊಡಿಸಬೇಕೆಂದು ಆಯೋಗದ ಮೆಟ್ಟಿಲೇರಿದ್ದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರು, ಮೂತ್ರಪಿಂಡ ತಜ್ಞ ಡಾ|| ಮಂಜುನಾಥ ಎಸ್.ಶೆಟ್ಟಿ, ಡಾ||ಸಮರ್ಥ್ ಅವರಿಗೆ ದಂಡ ವಿಧಿಸಲಾಗಿದೆ. ಪ್ರಕರಣದ ನಾಲ್ಕನೇ ಎದುರುದಾರರಾಗಿದ್ದ ಹಾಸನದ ಸ್ವಾಸ್ಥ್ಯ ಕಿಡ್ನಿಕೇರ್ ಹಾಗು ಸಹ್ಯಾದ್ರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಕರಣದಿಂದ ಕೈಬಿಡಲಾಗಿದೆ.

### ಪ್ರಕರಣ ಹಿನ್ನಲೆ

ಹೆಚ್.ಬಿ.ರಾಜು ಅವರ ಅನಾರೋಗ್ಯ ಹಿನ್ನಲೆಯಲ್ಲಿ ನಗರದ ಸ್ವಾಸ್ಥ್ಯ ಕಿಡ್ನಿಕೇರ್‌ನಲ್ಲಿ ಮೊದಲು ತೋರಿಸಲಾಗಿತ್ತು. ಅಲ್ಲಿನ ವೈದ್ಯರ ಸೂಚನೆ ಮೇರೆಗೆ ಸಹ್ಯಾದ್ರಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮೂರು ದಿನ ಒಳರೋಗಿಯಾಗಿ ದಾಖಲಿಸಲಾಗಿತ್ತು. ಕೆಲ ದಿನಗಳ ಬಳಿಕ ಮೂತ್ರ ಕೋಶದಲ್ಲಿ ಸಮಸ್ಯೆ ಕಂಡು ಬಂದ ಹಿನ್ನಲೆಯಲ್ಲಿ ಸಹ್ಯಾದ್ರಿ ಆಸ್ಪತ್ರೆಯ ವೈದ್ಯರು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಶಿಫಾರಸ್ಸು ಮಾಡಿದ್ದರು. ವೈದ್ಯರ ನಿರ್ದೇಶನದಂತೆ ರಾಜು ಅವರನ್ನು ಮೈಸೂರಿಗೆ ಕರೆದೊಯ್ಯಲಾಗಿತ್ತು.

ಅಲ್ಲಿ ರೋಗಿಯ ಪರೀಕ್ಷೆ ನಡೆಸಿದ್ದ ವೈದ್ಯರು ದೀರ್ಘ ಕಾಲದ ಮೂತ್ರ ಪಿಂಡ ಖಾಯಿಲೆಯಿಂದ ಬಳಲುತ್ತಿದ್ದು, ಹಂತ ಹಂತವಾಗಿ ಸುಧಾರಣೆ ಆಗಲಿದೆ ಎಂದಿದ್ದರು. 2023ರ ಜ.9 ರಂದು ರಾಜು ಅವರಿಗೆ ತೀವ್ರ ಹೊಟ್ಟೆ ನೋವು ಕಾಣಿಸಿಕೊಂಡಾಗ ನರ್ಸ್ ಹೊಟ್ಟೆ ನೋವಿನ ಕಾರಣ ಅರಿಯದೆ ನೋವು ನಿವಾರಕ ಚುಚ್ಚುಮದ್ದು ನೀಡಿ ಖಾಯಿಲೆ ಗಂಭೀರ ಸ್ವರೂಪಕ್ಕೆ ತಿರುಗುವಂತೆ ಮಾಡಿದರು. ಮಾರನೇ ದಿನ ವೈದ್ಯರು ಪರೀಕ್ಷಿಸಿ ಫಿಸಿಯೋಥೆರಪಿ ಮಾಡಿಸಿದರು. ಈ ವೇಳೆ ಊಟದ ಕಣಗಳು ಶ್ವಾಸಕೋಶಕ್ಕೆ ಸೇರಿದ್ದರಿಂದ ಶ್ವಾಸಕೋಶ ಮತ್ತು ಇನ್ನಿತರ ಅಂಗಗಳು ತೀವ್ರ ತರದ ಸೋಂಕಿಗೆ ಒಳಗಾಗಿ ರೋಗಿಗೆ ನ್ಯೂಮೋನಿಯಾ ಉಂಟಾಗಿ ಎರಡು ದಿನಗಳ ಬಳಿಕ ರಾಜು ಮೃತಪಟ್ಟಿದ್ದರು. ಈ ವೇಳೆ ರೋಗಿ ನ್ಯುಮೋನಿಯಾದಿಂದ ಮೃತಪಟ್ಟಿದ್ದರೂ ಹೃದಯಾಘಾತದಿಂದ ಸಾವು ಸಂಭವಿಸಿದೆ ಎಂದು ಸುಳ್ಳು ಹೇಳಲಾಗಿತ್ತು.

ವೈದ್ಯರ ನಿರ್ಲಕ್ಷ್ಯದಿಂದಲೇ ತಮ್ಮ ಪತಿ ನಿಧನರಾಗಿದ್ದಾರೆಂದು ಭವಾನಿ ಅವರು 2025ರ ಫೆ. 21ರಂದು 50 ಲಕ್ಷ ರೂ. ಸೇವಾ ನ್ಯೂನ್ಯತೆ ಪರಿಹಾರ ಕೊಡಿಸಬೇಕೆಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮೆಟ್ಟಿಲೇರಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಸಿ.ಎಂ.ಚಂಚಲ ಹಾಗು ಸದಸ್ಯೆ ಆರ್.ಅನುಪಮಾ ಅವರ ಪೀಠವು, ವಾದ ಪ್ರತಿವಾದ ಆಲಿಸಿ ಆದೇಶ ಪ್ರಕಟಿಸಿದೆ. ವಿಚಾರಣೆ ವೇಳೆ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ವೈದ್ಯರು, ರಾಜು ಅವರು

» ನಾಲ್ಕನೇ ಪುಟದಲ್ಲಿ

# ಚಿನ್ನ ಖರೀದಿಗೆ ಹೂಡಿಕೆ: ವಂಚನೆ

**ಹಾಸನ:** ಎಸ್.ಕೆ.ಗೋಲ್ಡ್ ಬೆನಿಫಿಟ್ ಸ್ಕೀಂ ಹೆಸರಿನಲ್ಲಿ ಚಿನ್ನ ಖರೀದಿಗಾಗಿ ಹಣ ಹೂಡಿದ್ದವರಿಗೆ ಮೋಸ ಮಾಡಿರುವ ಘಟನೆ ನಗರದಲ್ಲಿ ನಡೆದಿದೆ.

ಇಂತಿಷ್ಟು ದಿನ ಹಣ ಹೂಡಿದರೆ ಚಿನ್ನ ಕೊಡುವುದಾಗಿ ನಂಬಿಸಿ ಎಸ್.ಕೆ.ಗೋಲ್ಡ್ ನವರು ಬೆನಿಫಿಟ್ ಸ್ಕೀಮ್ ಹೆಸರಿನಲ್ಲಿ ಹಣ ಕಟ್ಟಿಸಿಕೊಂಡು ಕಾರ್ಡ್ ಸಹ ನೀಡಿದ್ದರು. ಆದರೀಗ ಹಣ ಕಟ್ಟಿ ಮೋಸ ಹೋದ ಮಹಿಳೆಯರು ಇದೀಗ ಕಣ್ಣೀರಿಡುತ್ತಿದ್ದಾರೆ. ಎಸ್.ಕೆ.ಗೋಲ್ಡ್ ಹಾಗು ಸಮೃದ್ಧಿ ಸಿರಿ ಪ್ರೀಸಿಯಸ್ ಕಂಪನಿ ಪ್ರೈ.ಲಿ ಹೆಸರಿನಲ್ಲಿ, ನಕಲಿ ವಿಳಾಸ ಕೊಟ್ಟು ಕಾರ್ಡ್ ನೀಡಿ ಹಣ ಸಂಗ್ರಹ ಮಾಡಿರುವುದು ಬಯಲಾಗಿದೆ.

ಚಿನ್ನ ಗಿರವಿ ಇಟ್ಟುಕೊಳ್ಳುವುದಾಗಿ ಹೇಳಿ ಅದರಲ್ಲೂ ಮೋಸ ಮಾಡಿದ್ದಾರೆ ಎನ್ನಲಾಗಿದೆ. ಗಿರವಿ ಇರಿಸಿಕೊಂಡಿದ್ದ ಚಿನ್ನವನ್ನೂ ಮಾರಾಟ ಮಾಡಿದ್ದಾರೆಂಬ ಆರೋಪ ಕೇಳಿ ಬಂದಿದೆ. ಚಿನ್ನ ಮತ್ತು ಹಣಕ್ಕಾಗಿ ವಂಚನೆಗೆ ಒಳಗಾಗಿರುವ ಮಹಿಳೆಯರು ನಗರ ಠಾಣೆಗೆ ದೂರು ನೀಡಿದ್ದಾರೆ.

## ಜಿ.ಪಂ.ವ್ಯಾಪ್ತಿಯ ಅಧಿಕಾರಿಗಳಿಗೆ ನೂತನ ಸಿಇಒ ಶುಭಂ ಶುಕ್ಲಾ ಎಚ್ಚರಿಕೆ

# ನಿಯಮ ಪ್ರಕಾರ ಸಮರ್ಪಣಾ ಭಾವದಿಂದ ಕೆಲಸ ಮಾಡಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಅಧಿಕಾರಿಗಳು ಸಮರ್ಪಣಾ ಭಾವದಿಂದ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಜನರ ಪರವಾಗಿ, ಬಡವರು, ದಲಿತರ ಪರವಾಗಿ ನಿಯಮ ಪ್ರಕಾರ ಕೆಲಸ ಮಾಡಿ, ನಿಯಮ ಬಿಟ್ಟು ಕೆಲಸ ಮಾಡಲು ಅವಕಾಶ ನೀಡುವುದಿಲ್ಲವೆಂದು ಜಿಲ್ಲಾ ಪಂಚಾಯಿತಿ ನೂತನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಅವರು ಹೇಳಿದರು.

ಬುಧವಾರ ಅಧಿಕಾರ ವಹಿಸಿಕೊಂಡ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಅಧಿಕಾರಿ ನಿಯಮದ ಪ್ರಕಾರ ಕೆಲಸ ಮಾಡಿದರೆ ವೃತ್ತಿ ಜೀವನ ಚೆನ್ನಾಗಿ ಇರಲಿದೆ. ನಮ್ಮ ಸ್ಥಾನಕ್ಕೆ, ಕರ್ತವ್ಯಕ್ಕೆ ನ್ಯಾಯ ಒದಗಿಸಿದಂತಾಗಲಿದೆ, ಎಲ್ಲಾ ಅಧಿಕಾರಿಗಳು ತಲೆ ಎತ್ತಿ ಕೆಲಸ



ಮಾಡಬೇಕೆಂದು ಹೇಳಿದರು.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಹಾಗು ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತ ಸದಸ್ಯರ ಅಧಿಕಾರ ಮುಗಿದು ಹಲವು ವರ್ಷಗಳೇ ಕಳೆದಿದ್ದು, ಅಧಿಕಾರಿಗಳೊಂದಿಗೆ ಕೆಲಸ ಮಾಡುವುದು ಒಂದು ರೀತಿಯಲ್ಲಿ ಸವಾಲು ಇದೆ. ಇಂತಹ ಸನ್ನಿವೇಶದಲ್ಲಿ ಉತ್ತಮ ಕೆಲಸ ಮಾಡಲು ನನಗೊಂದು ಅವಕಾಶ ಸಿಕ್ಕಿದೆ. ನನ್ನ ಮೇಲೆ ವಿಶ್ವಾಸ ಇಟ್ಟು ಇಲ್ಲಿಗೆ ಕಳುಹಿಸಿರುವ ಹಿರಿಯ ಅಧಿಕಾರಿಗಳಿಗೆ ಧನ್ಯವಾದ ಹೇಳುತ್ತೇನೆ. ಅವರ ನಿರೀಕ್ಷೆಯಂತೆ ಕೆಲಸ ಮಾಡುವುದಾಗಿ ಹೇಳಿದರು.

> ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಪ್ರಗತಿ ಸೇರಿ ಪಂಚಾಯತ್ ರಾಜ್ ವ್ಯಾಪ್ತಿಯಲ್ಲಿ ಉತ್ತಮ ಕೆಲಸ ಮಾಡುವ ಆಸೆ ಇದ್ದು, ಅದನ್ನು ಕಾರ್ಯಗತಗೊಳಿಸುತ್ತೇನೆ.
> -ಶುಭಂ ಶುಕ್ಲಾ, ಜಿಲ್ಲಾ ಪಂಚಾಯಿತಿ ನೂತನ ಸಿಇಒ

ಈ ಹಿಂದೆ ನಡೆದಿರುವ ಆಶ್ರಯ ಯೋಜನೆಯಡಿ ಅಕ್ರಮದ ಬಗ್ಗೆ ಸಚಿವರ ಗಮನಕ್ಕೆ ಹೋಗಿರುವುದರಿಂದ ಅವರು ಏನು ಕ್ರಮ ಜರುಗಿಸುತ್ತಾರೋ ಜರುಗಿಸಲಿ, ನಮ್ಮ ವ್ಯಾಪ್ತಿಯಲ್ಲಿ ನೊಂದವರಿಗೆ ನ್ಯಾಯ ಕೊಡಿಸಲು ಏನು ಮಾಡಬೇಕೋ ಅದನ್ನು ಮಾಡುವುದಾಗಿ ಭರವಸೆ ನೀಡಿದರು.

ಜೆಜೆಎಂ ಯೋಜನೆಯಲ್ಲಿ ಕಳಪೆಯಾಗಿದೆ, ಅರೆಬರೆಯಾಗಿದೆ ಎಂಬ ಆರೋಪ ಇದೆ ಎಂಬ ಪ್ರಶ್ನೆಗೆ ಯಾವುದೇ ಯೋಜನೆ ಇರಲಿ, ಯಾವ ಹಂತದಲ್ಲಿದೆ, ಏನು ಪ್ರಗತಿಯಾಗಿದೆ ಎಂಬ ಬಗ್ಗೆ ಮೊದಲು ಆಡಿಟ್ ಮಾಡಬೇಕು. ಆ ನಂತರ ಏನು ಮಾಡಬೇಕೆಂಬುದನ್ನು ಹೇಳಬಹುದು. ಕೆಲವೊಂದು ಮೇಲ್ಮಟ್ಟದ ಅಧಿಕಾರಿಗಳ ಕೈಯಲ್ಲಿ ಇರುತ್ತದೆ. ನಮ್ಮ ಹಂತದಲ್ಲಿರುವುದನ್ನು ಅವರ ಗಮನಕ್ಕೆ ತರುವ ಕೆಲಸ ಮಾಡುವೆ ಎಂದರು.

### ಕುಡಿಯುವ ನೀರಿನ ನಿವಾರಣೆಗೆ ಕ್ರಮ

ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರಬಾರದು. ಶೇ.100 ರಷ್ಟು ನೀರು ದೊರೆಯಬೇಕೆಂಬ ನಿಟ್ಟಿನಲ್ಲಿ ಗಮನ ಹರಿಸಲಾಗುವುದು. ಇದು ನಮ್ಮ ಟಾರ್ಗೆಟ್ ಕೂಡ, ರಾಜ್ಯ ಸರ್ಕಾರವೂ ಅದನ್ನೇ ಹೇಳಿದೆ. ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಈಗಾಗಲೇ ಸರ್ಕಾರದ ಕಡೆಯಿಂದ ಎಲ್ಲಾ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗು ಉಪವಿಭಾಗಾಧಿಕಾರಿಗಳಿಗೆ ಮಾರ್ಗದರ್ಶನ ಬಂದಿದೆ. ಅದರಂತೆ ತಾವು ಜಿಲ್ಲೆಯ ಎಲ್ಲಾ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗುವುದು ಎಂದರು.

ಜಿಲ್ಲಾಡಳಿತ ಹಾಗು ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳೊಂದಿಗೆ ಸಮನ್ವಯತೆ ಸಾಧಿಸಿ, ಎಲ್ಲರ ಸಹಕಾರದಿಂದ ಕೆಲಸ ಮಾಡಲಾಗುವುದು. ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಇದೆ. ಅದರ ಮೂಲಕ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲೂ ಟಾಸ್ಕ್‌ಫೋರ್ಸ್ ರಚಿಸಿ, ಚರ್ಚಿಸಿ ಸರ್ಕಾರದ ಮಾರ್ಗದರ್ಶನ, ನಿಯಮಾವಳಿ ಪ್ರಕಾರ ನೀರಿಗೆ ಸಮಸ್ಯೆ ಇರುವ ಕಡೆ ಖಾಸಗಿ ಬೋರ್‌ವೆಲ್‌ಗಳು ಅಥವಾ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುವುದೆಂದರು.

# ಕದನ ಕುತೂಹಲ...!

» ಬಹುಶಃ ಕಿಶೋರಾವಸ್ಥೆಯಿಂದಲೂ ಹೊತ್ತು ಮೂಡಿ ಕುಕ್ಕುಟಗಳು ಕೊಕ್ಕೋ ಎನ್ನುವ ಮೊದಲೇ ಹಕ್ಕಿಗಳ ಚಿಲಿಪಿಲಿ ಗಾನ ಕಣ್ಮುಚ್ಚಿ ಕನಸು ಕಾಣುತ್ತಿದ್ದ ನಮ್ಮ ಕಿವಿಗಳನ್ನು ತಲುಪುವ ಪೂರ್ವದಲ್ಲಿಯೇ ಅಕ್ಕಪಕ್ಕದವರ ಕರ್ಣಕಠೋರವಾದ ಜಗಳದ ಅಬ್ಬರದ ಸುಪ್ರಭಾತವಾಗುತ್ತಿತ್ತು. ಅಷ್ಟರಲ್ಲಾಗಲೇ ಎದ್ದು ದೇವರ ನಾಮ ಹೇಳಿಕೊಳ್ಳುತ್ತಿದ್ದ ಅಜ್ಜಿ ಜಗಳದಲ್ಲಿನ ಅವಾಚ್ಯಗಳನ್ನು ಸಹಿಸದೆ ಕಿವಿಮುಚ್ಚಿಕೊಂಡು ರಾಮ, ರಾಮ ಎನ್ನುವಾಗಲೇ ದಿನನಿತ್ಯದ ಕಾರ್ಯ ಪರಂಪರೆಯಲ್ಲಿ ತೊಡಗಿರುತ್ತಿದ್ದ ಅಮ್ಮ ರೇಡಿಯೋ ಆನ್ ಮಾಡಿ ಗರಿಷ್ಟ ವಾಲ್ಯೂಮ್ ಕೊಟ್ಟು ಆ ಕೆಟ್ಟ ಪದಗಳು ಎದ್ದಾಕ್ಷಣವೇ ಮಕ್ಕಳ ಕಿವಿಯ ಮೇಲೆ ಬೀಳದಂತೆ ಜಾಗ್ರತೆ ವಹಿಸುತ್ತಿದ್ದರು.



**ಮನೆಯಲ್ಲಿ ಜಗಳಗಳಿಂದಾಗುವ ಕೋಪತಾಪಕ್ಕೆ ಬೆದರಿ, ಅದರ ಸಹವಾಸವೇ ಬೇಡವೆಂದು ಮೌನವಾಗಿಯೇ ದಿನಗಳನ್ನು ಕಳೆದ ಲೇಖಕಿ, ಮದುವೆಯಾದ ನಂತರ ಜಗಳಾಡುವುದನ್ನು ಕಲಿತದ್ದಾದರೂ ಹೇಗೆ? ಅದಕ್ಕೆ ಯಾರ ಮಾರ್ಗದರ್ಶನ?**



ಜಗಳದಲ್ಲಿ ನಮ್ಮತ್ತೆಯದೂ ಪಾಲಿದ್ದರಂತೂ ಕೇಳುವಂತೆಯೇ ಇರಲಿಲ್ಲ. ಅವರು ಪ್ರತಿದಿನವೂ ತಪ್ಪದೇ ಓದುತ್ತಿದ್ದ ಕುಮಾರವ್ಯಾಸಭಾರತದ ಪ್ರಭಾವದಿಂದಲೋ ಏನೋ ಸುಸಂಸ್ಕೃತ ಪದಪುಂಜಗಳೊಂದಿಗೇ ತಾವು ಪ್ರೀತಿಯಿಂದ ಬೆಳೆಸಿದ ಗಿಡಗಳನ್ನು ಧ್ವಂಸಮಾಡಿದ ದನಗಳ ಮಾಲೀಕರ ಜನ್ಮ ಜಾಲಾಡುತ್ತಿದ್ದರು. ಬೆಳಗಿನಿಂದ ರಾತ್ರಿಯವರೆಗೂ ಸುತ್ತಮುತ್ತಾ ಒಂದಲ್ಲಾ ಒಂದು ಜಗಳವಾಗುತ್ತಿದ್ದರೂ ಅದರಿಂದ ಸ್ವಲ್ಪವೂ ವಿಚಲಿತವಾಗದಂತೆ ನಮ್ಮ ಬಾಲ್ಯ ಮುನ್ನಡೆಯುತ್ತಿತ್ತು. ಆದರೂ ನಮ್ಮ ನಮ್ಮ ನಡುವೆ ಆಗಾಗ ನಡೆಯುತ್ತಿದ್ದ ಕೋಳಿಜಗಳಗಳನ್ನು ಬಿಡಿಸುವುದರಲ್ಲೇ ಮನೆಯವರಿಗೆ ಸಾಕುಸಾಕಾಗಿ ಮಕ್ಕಳೂ ಎಲ್ಲಿ ಜಗಳಗಂಟರಾಗುತ್ತಾರೋ ಎಂದು ಪರಿತಪಿಸುವಂತಾಗುತ್ತಿತ್ತು. ಇದಕ್ಕೆ ಅಪವಾದವೆನ್ನುವಂತೆ ನಾನು ಮಾತ್ರ ಯಾವ ಜಗಳದಲ್ಲೂ ಭಾಗಿಯಾಗದೇ ಬಲಾಢ್ಯರಿಗೆ ತಗ್ಗಿಬಗ್ಗಿ ನಡೆಯುತ್ತಾ ಸೋಲುವುದರಲ್ಲೇ ಸಂತೃಪ್ತಳಾಗಿ ಹಿರಿಯರ ಮೆಚ್ಚುಗೆಗೆ ಪಾತ್ರಳಾಗಿದ್ದೆ. ಆದರೆ ಸಹಜ ರಾಜಸ ಪ್ರವೃತ್ತಿಯ ನಮ್ಮತ್ತೆ ಮಾತ್ರ ಇಷ್ಟೊಂದು ಮೆದುಗಲಾದರೆ ಮುಂದೆ ಹೇಗೆ ನಿಭಾಯಿಸುತ್ತೋ ಎಂದು ಅಲವತ್ತುಕೊಳ್ಳುತ್ತಿದ್ದರು.

ನಮ್ಮ ಹಳ್ಳಿಯಲ್ಲಿ ಮಾತುಮಾತಿಗೂ ಜಗಳ ನಡೆಯುತ್ತಿದ್ದು ವಿಕೋಪಕ್ಕೆ ಹೋಗಿ ಹೊಡೆದಾಡುವ ಹಂತವನ್ನೂ ತಲುಪುತ್ತಿತ್ತು. ಕುಟುಂಬದ ಒಳಗಿನ ಕಲಹವಾಗಲೀ, ಕುಟುಂಬಗಳ ನಡುವಿನದಾಗಲೀ ಅಪರಿಹಾರ್ಯವೆನಿಸಿದಾಗ ಶಾಂತಿಪ್ರಿಯರಾದ ನಮ್ಮ ತಂದೆಯ ಬಳಿಗೇ ಬರುತ್ತಿದ್ದರು. ಅವರು ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ ಎಂದು ಒಮ್ಮೊಮ್ಮೆ ಸಮಾಧಾನಿಸಿದರೆ ಕಾದ ಮನೆ ಕಲ್ಲಾಯ್ತು, ಹೋರಿದ್ದ ಮನೆ ಹುಲ್ಲಾಯ್ತು ಎಂಬ ಗ್ರಾಮ್ಯ ನುಡಿಗಟ್ಟನ್ನು ಹೇಳಿ ಜಗಳದ ಪರಿಣಾಮವನ್ನು ತಿಳಿಸುವ ಪ್ರಯತ್ನ ಮಾಡುತ್ತಿದ್ದರು. ಆದರೂ ನಾಯಿಬಾಲ ಡೊಂಕು ಎನ್ನುವಂತೆ ಹೊಸಹೊಸ ಕಾರಣಗಳಿಗೆ ಕಾದಾಟ ನಡೆಯುವುದಂತೂ ತಪ್ಪುತ್ತಿರಲಿಲ್ಲ.

ಶಾಲೆಗೆ ಹೋಗಲು ಪ್ರಾರಂಭಿಸಿದ ನಂತರ ಜೊತೆಯವರು ಕ್ಷುಲ್ಲಕ ಕಾರಣಗಳಿಗೂ ಕಿತ್ತಾಡುವುದನ್ನು ನೋಡಿ ಯಾರ ಬಳಿಯೂ ಸಲುಗೆಯಿಂದಿರಲು ಭಯವಾಗಿ ತಟಸ್ಥಳಾದಾಗ ಮಕ್ಕಳ ಕಿತಾಪತಿಯಿಂದ ತಲೆ ಚಿಟ್ಟುಹಿಡಿಸಿಕೊಂಡ ಶಿಕ್ಷಕರೇನೋ ಅವಳನ್ನು ನೋಡಿ ಕಲಿಯಿರಿ ಎಂದು ಮೆಚ್ಚುಗೆ ಸೂಸಿದರೂ ಸಹಪಾಠಿಗಳಿಂದ ಒಂಟರಬಡುಕ ಸುಂಟರಗಾಳಿ ಎನಿಸಿಕೊಳ್ಳುವಂತಾಯ್ತು. ಅಂತೂ ಶಾಂತಿಧೂತಳಂತೆ ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೂ ಸೇರಿದ್ದೇನೋ ಆಯ್ತು. ಆದರೆ ಹೀಗೇ ಏಕಾಂಗವೀರಳಾಗಿ ವೈವಾಹಿಕ ಜೀವನದಲ್ಲಿ ಮುನ್ನಡೆಯಲಾಗಲಿಲ್ಲ. ಹೇಗೋ ಏನೋ ಎಂಬ ಅಳುಕಿನಲ್ಲಿ ಹೊಸದರಲ್ಲಿ ಸ್ವಲ್ಪಸ್ವಲ್ಪವೇ ಅಧಿಕಾರ ಚಲಾವಣೆ ಮಾಡುತ್ತಾ ಇದ್ದ ನನ್ನವರು ಸಂಪೂರ್ಣ ಸ್ವಾಮ್ಯಕ್ಕೊಳಪಡಲು ಸಿದ್ಧಳಿಲ್ಲವೆನ್ನುವುದನ್ನು ಮನಗಂಡು ಭಿನ್ನಾಭಿಪ್ರಾಯ ತಲೆದೋರಿದಾಗಲೆಲ್ಲಾ ವಾಗ್ಬಾಣಗಳನ್ನು ಪ್ರಯೋಗಿಸುತ್ತಾ ನೇರ ಹೋರಾಟಕ್ಕೇ ಆಹ್ವಾನ ನೀಡಲಾರಂಭಿಸಿದರು. ಮೊದಲೇ ಜಗಳವೆಂದರೇ ಮಾರುದೂರ ಹಾರುತ್ತಿದ್ದ ನಾನು ಹೇಗೂ ತಪ್ಪಿಸಿಕೊಳ್ಳಲಾರದೇ ಪ್ರಾರಂಭಿಕ ಮೌನರೋಧನದ ನಂತರ ಅಸ್ತ್ರಗಳಿಗೆ ಪ್ರತ್ಯಸ್ತ್ರ ಹೂಡುವ ತಂತ್ರಗಳನ್ನು ಅವರ ನಡೆ-ನುಡಿಗಳನ್ನೇ ಗಮನಿಸುತ್ತಾ ಒಂದೊಂದಾಗಿ ಅಭ್ಯಾಸ ಮಾಡಿಕೊಳ್ಳಲಾರಂಭಿಸಿದೆ. ಹೀಗಾಗಿ ಕಲಹಮಲ್ಲರಾದ ನನ್ನವರೇ ನನ್ನ ಕಲಹಕಲಿಕಾ ಮಾರ್ಗದರ್ಶಕರೆಂದು ನಿಸ್ಸಂಶಯವಾಗಿ ಒಪ್ಪಿಕೊಳ್ಳುವಂತಾಯ್ತು. ಕ್ರಮೇಣ ಗುರುವಿನಮಿಂಚಿನ ಶಿಷ್ಯಳಾಗಿ ಅವರಿಗೆ ಸರಿಪಟ್ಟಿಕೊಂಡು ಕಲಹ ಮಾಡುವ ಕಲೆ ಕರತಲಾಮಲಕವಾಗುವಂತಾಗಿ ಜಗಳಮಾಡುವುದರಲ್ಲಿಯೂ ಎಂಥಾ ಖುಷಿಯಿದೆಯೆಂದು ಅಚ್ಚರಿಪಡುವಂತಾಯಿತು!

ಜಗಳವಿರದ ಮನೆಯಿರಲು ಸಾಧ್ಯವೇ ಎಂಬ ಪರಮ ಸತ್ಯದ ಅರಿವಾದ ನಂತರ ಅದರ ಧನಾತ್ಮಕ ಅಂಶವಾದ ಮನದೊಳಗಿನ ಒಂದೊಂದೇ ಮಾತು ಹೊರಬರುವುದರಿಂದ ಮನಸ್ಸಿನ ಒತ್ತಡ ಕಡಿಮೆಯಾಗುವುದು ಎನ್ನುವುದೂ ಮನದಟ್ಟಾಗಿ ನನ್ನ ಸಪ್ಪೆ ಜೀವನಕ್ಕೆ ವಿದಾಯ ಹೇಳಿದೆ. ಆಹಾ ನನ್ನಲ್ಲೇ ಹುದುಗಿದ್ದ ಅಪಾರ ಸಾಮರ್ಥ್ಯವನ್ನು ಹೊರಹೊಮ್ಮಿಸಿದ ಕಲಹಾನಂದವೇ!

ಈ ಕಲಹವೆನ್ನುವುದು ಇವತ್ತು-ನಿನ್ನೆಯದಲ್ಲ. ನಮ್ಮ ಪುರಾಣಗಳಲ್ಲಿರುವಂತೆ ಸಮುದ್ರ ಮಂಥನದ ಸಂದರ್ಭದಲ್ಲಿ ದೇವತೆಗಳು ಮತ್ತು ದಾನವರ ನಡುವೆ ಮಹಾನ್ ಕದನವೇ ನಡೆದಿದೆ. ಮಹಾಭಾರತದಲ್ಲಿ ಅಧಿಕಾರ ಲಾಲಸೆಗಾಗಿ ಕೌರವರು ಮತ್ತು ಪಾಂಡವರ ನಡುವೆ ಘನಘೋರವಾದ ಕುರುಕ್ಷೇತ್ರಯುದ್ಧವೇ ಆಗಿದೆ. ಕಲಹ ಪ್ರಿಯರೆಂದೇ ಪ್ರಸಿದ್ಧರಾಗಿದ್ದ ನಾರದ ಮುನಿಗಳು ದೇವ-ದಾನವರು, ರಾಜ-ಮಹಾರಾಜರು, ಋಷಿ-ಮುನಿಗಳ ನಡುವೆ ಕಲಹ ಮಾಡುವಂತೆ ಪ್ರೇರೇಪಿಸಬಲ್ಲವರಾಗಿದ್ದರು. ನಾರಾದರೆಲ್ಲೆಲ್ಲಿ ಕದನಕಿಕ್ಕುವರೊ... ಎಂದು ಕದನ ಕುತೂಹಲಿಯಾಗಿದ್ದ ನಮ್ಮತ್ತೆ ಆಗಾಗ ಹಾಡುತ್ತಿದ್ದರು!

ಇತಿಹಾಸವೂ ರೋಮನ್ ಸಾಮ್ರಾಜ್ಯವು ಪತನಗೊಂಡಿದ್ದು ಆಂತರಿಕ ಕಲಹಗಳಿಂದಲೇ ಎಂದು ಸಾರುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿಯೂ ಜಗತ್ತಿನಾದ್ಯಂತ ವೈಮನಸ್ಯದಿಂದುಂಟಾದ ಸಂಘರ್ಷಗಳ ವೈಪರೀತ್ಯಗಳನ್ನು ನೋಡುತ್ತಲೇ ಇದ್ದೇವೆ.

ಪ್ರಾಣಿಜಗತ್ತಿನಲ್ಲಿಯೂ ಆಹಾರಕ್ಕೆ, ಆವಾಸಸ್ಥಾನಕ್ಕೆ ಕಾದಾಡುವುದು ಸರ್ವೇಸಾಮಾನ್ಯ. ಮರಿಗಳನ್ನು ಕಾಪಾಡುವುದಕ್ಕೆ ತಮ್ಮ ಜೀವವನ್ನೇ ಪಣಕ್ಕಿಟ್ಟು ಹೋರಾಡುತ್ತವೆ. ನಮ್ಮ ಗದ್ದೆಯ ಹತ್ತಿರ ಆಲದ ಮರದ ಪೊಟರೆಯಲ್ಲಿ ಹಕ್ಕಿಯ ಮೊಟ್ಟೆ ಎಗರಿಸಲು ಹಾವು ಬಂದಾಗ ತಾಯಿಹಕ್ಕಿಯ ಆಕ್ರಮಣದ ಹೋರಾಟ-ಚೀತ್ಕಾರ ಬಹಳ ಬೀಭತ್ಸವಾಗಿರುತ್ತಿತ್ತು! ಇನ್ನು ಒಂದು ಹೆಣ್ಣಿಗಾಗಿ ಗಂಡುಗಳೆರಡು ನಡೆಸುವ ಕಾಳಗವಂತೂ ಬಲು ಭೀಕರ. ಮನುಷ್ಯರಲ್ಲೂ ಇಂಥಾ ಮೃಗೀಯ ವರ್ತನೆಯ ಸುದ್ದಿಗಳು ಆಗಾಗ ಬರುತ್ತಲೇ ಇರುತ್ತವೆ. ನಮ್ಮ ಕಡೆ ವೈಷಮ್ಯದ ದಾಂಪತ್ಯವನ್ನು ಬೆಕ್ಕಿನ ಸಂಸಾರ ಎನ್ನುವ ವಾಡಿಕೆಯಿದೆ. ನಮ್ಮ ಗಾರ್ಡನ್ ಮತ್ತು ಟೆರೇಸ್‌ಗಳನ್ನೇ ತಮ್ಮ ಕದನಕ್ಷೇತ್ರವಾಗಿಸಿಕೊಳ್ಳುವ ಬೆಕ್ಕುಗಳ ಹೋರಾಟದ ಪೂರ್ವ ಚೀರಾಟದಿಂದ ಎಷ್ಟೋಬಾರಿ ಬೆಚ್ಚಿಬಿದ್ದಿದ್ದೇವೆ. ನೀರುನಾಯಿಗಳು ಕಾದಾಟವನ್ನೇ ಆಡುತ್ತಾ ಕದನಕಲೆಯಲ್ಲಿ ಪಳಗುತ್ತವಂತೆ!

ಕದನ ಕುತೂಹಲ ರಾಗವು ಪಟ್ಣಂ ಸುಬ್ರಮಣ್ಯ ಅಯ್ಯರ್ ಅವರು ಜನಪ್ರಿಯಗೊಳಿಸಿರುವ, ಕೇಳುಗರಲ್ಲಿ ಉತ್ಸಾಹ ಮತ್ತು ಶೌರ್ಯದ ಭಾವನೆಯನ್ನು ಮೂಡಿಸುವ ರಾಗವಾಗಿದೆ. ಶ್ರೋತೃಗಳು ಸಂಗೀತದಲ್ಲಿ ತನ್ಮಯರಾಗಿ ಇನ್ನೇನು ನಿದ್ರಾದೇವಿಗೆ ಶರಣಾಗುವ ವೇಳೆಗೆ ರಘುವಂಶ ಸುಧಾಂಬುಧೀ ಚಂದ್ರಿಕೆ ಎಂದು ಪ್ರಾರಂಭಿಸಿದಾಕ್ಷಣವೇ ಥಟ್ಟನೆ ಎಚ್ಚರಗೊಳ್ಳುತ್ತಾರೆಂದರೆ ಅದರ ಕೀರ್ತಿ ಕದನಕ್ಕೇ ಸಲ್ಲಬೇಕಲ್ಲವೆ! ಕದನ ಕುತೂಹಲ ರಾಗವೆನ್ನುವುದು ಯುದ್ಧದ ಮುನ್ನ ವೀರನ ಮನಸ್ಸಿನಲ್ಲಿ ಮೂಡುವ ವಿಶಿಷ್ಟ ಭಾವಸ್ಥಿತಿಯನ್ನು ಸೂಚಿಸುವ ಸಾಹಿತ್ಯಾತ್ಮಕ ಪದಗುಚ್ಛವೆಂದೂ ಹೇಳುತ್ತಾರೆ. ಈಗಂತೂ ಸ್ಟ್ರಾಟಜಿಕ್ ವಾರ್‌ಗಳು! ಸಾಹಿತ್ಯಕ್ಷೇತ್ರದಲ್ಲಿಯೂ ಆಗಾಗ ಲೇಖಕರು ಹಾಗೂ ವಿಮರ್ಶಕರ ನಡುವೆ ಮುಸುಕಿನೊಳಗಿನ ಗುದ್ದಾಟದಂಥಾ ಕೋಲ್ಡ್ ವಾರ್‌ಗಳು ನಡೆಯುತ್ತಲೇ ಇರುತ್ತವೆ. ಬಹಳ ಸೀರಿಯಸ್ ಆಯ್ತಲ್ವಾ? ಸಣ್ಣ ಕಿಡಿಯಿಂದ ಬೃಹತ್ ಸ್ಫೋಟವೇ ಆಗುವಂತೆ ರಿಲ್ಯಾಕ್ಸ್ ರಿಲ್ಯಾಕ್ಸ್.

ಈಗ ಮತ್ತೆ ಕಮಿಂಗ್ ಬ್ಯಾಕ್ ಟು ಅವರ್ ಕುಟುಂಬ ಕಲಹ, ಗಂಡ-ಹೆಂಡತಿಯ ಜಗಳ ಉಂಡು ಮಲಗುವ ತನಕ ಎಂದರೆ ವಿರಸ ತಾತ್ಕಾಲಿಕವಾಗಿದ್ದು ಸರಸದೊಂದಿಗೆ ಮುಕ್ತಾಯವಾಗುತ್ತದೆ ಎಂಬ ಅತ್ಯಂತ ಜನಜನಿತವಾದ ಉಕ್ತಿಯೊಂದಿದೆ. ಆದರೆ ಈಗೀಗ ಆ ಜಗಳವು ಕೋರ್ಟ್ ಮೆಟ್ಟಿಲೇರುವವರೆಗೂ ಮುಂದುವರೆಯುತ್ತಿರುವುದು ವಿಷಾದನೀಯ. ಏನು ಮಾಡುವುದು ಪರಿಸ್ಥಿತಿ, ಮನಃಸ್ಥಿತಿ ಆದರೂ ಇತ್ತೀಚೆಗೆ ವಿದೇಶೀ ಹೈಕೋರ್ಟ್ ಒಂದರಲ್ಲಿ ನ್ಯಾಯಾಧೀಶರ ನಡುವೆ ಜಗಳದ ಕಾವೇರಿ ಕೈಕೈಮಿಲಾಯಿಸುವ ವಿಡಿಯೋ ನೋಡಿದಾಗ ಬೇಲಿಯೇ ಎದ್ದು ಹೊಲವನ್ನು ಮೇಯ್ದಂತಾಗಿ ನ್ಯಾಯ ಕೇಳಲು ಹೋಗುವುದಾದರೂ ಎಲ್ಲಿಗೆ ಎನಿಸದಿರುವುದಿಲ್ಲ!

ಮತ್ತದೇ ರಾಗ!...!...!

ನಾನೇನೋ ಜಗಳ ಮಾಡುವುದನ್ನು ಕಲಿತುಬಿಟ್ಟೆನೆಂದು ಬೀಗಬಹುದು, ಮಾತಿಗೆ ಮಾತಿನ ತಿರುಗೇಟು ಕೊಡುತ್ತಾ ಕಲಹಾನಂದವನ್ನೂ ಹೊಂದಬಹುದು, ಆದರೆ ಮನೆಯೇ ಮೊದಲ ಪಾಠಶಾಲೆಯಾದ್ದರಿಂದ ನಮ್ಮಂಥಾ ಕುಟುಂಬಗಳಲ್ಲಿ ಮಾತು ಕಲಿಯುವ ಮುನ್ನವೇ ಮಕ್ಕಳೂ ಜಗಳವಾಡುವುದನ್ನೇ ಕಲಿತುಬಿಟ್ಟರೆ! ಕುಟುಂಬದಲ್ಲಿ ಕಲಹ ಉಪ್ಪಿನಷ್ಟು ಇರಬೇಕು, ಜಾಸ್ತಿಯಾಯ್ತೆಂದರೆ ಊಟವೇ ಹಾಳು! ಎಂಬ ಅಜ್ಜಿಯ ಮಾತಿನಂತೆ ಹಿತಮಿತವಾಗಿದ್ದರೆ ಒಳಿತಲ್ಲವೆ.

**- ಪ್ರಭಾಮಣಿ ನಾಗರಾಜ,** ಹಾಸನ

# ಬೀದಿಯಾಟಗಳು



**ನಮ್ಮ ಹಳೆಯ ಕಾಲದ ಮಜಾವಾದ ಆಟಗಳಿವು:**

- ಗೋಲಿ ಆಟ
- ಬಿಲ್ಲುಬಾಣ
- ಪಲ್ಟಿ ಆಟ
- ಮರ ಮುಟ್ಟುವ ಆಟ
- ಕುಂಟೆಬಿಲ್ಲೆ
- ಟಯರ್ ಉರುಳಿಸುವುದು
- ಜೋಕಾಲಿ
- ಕಣ್ಣುಮುಚ್ಚಾಲೆ
- ಚಿನ್ನಿದಾಂಡು
- ಬುಗರಿ
- ಕಬಡ್ಡಿ

ರಜಾಕಾಲದಲ್ಲಿ ಕ್ರಿಕೆಟ್, ಫುಟ್-ಬಾಲ್, ವಾಲಿಬಾಲ್, ಬ್ಯಾಡ್ಮಿಂಟನ್, ಬಾಸ್ಕೆಟ್-ಬಾಲ್ ಇಂತಹ ಆಟಗಳ ಬದಲು ಬೀದಿಯಾಟಗಳನ್ನು ಆಡಬಹುದು. ಈಗ ಕ್ರಿಕೆಟ್ ಆಟದ ಗೀಳಿನಿಂದಾಗಿ ಈ ಬೀದಿಯಾಟಗಳು ಮರೆತು ಹೋಗಿವೆ. ಆದರೂ ಹಲವು ಊರುಗಳಲ್ಲಿ ಮಕ್ಕಳು ಈ ಆಟಗಳನ್ನು ಆಡುವುದನ್ನು ಕಾಣಬಹುದು. ಯಾಕೆಂದರೆ, ಅನೇಕ ಬೀದಿಯಾಟಗಳನ್ನು ಆಡಲು ಬ್ಯಾಟು ಅಥವಾ ಬಾಲು ಇಂತಹ ಪರಿಕರಗಳು ಬೇಕಾಗಿಲ್ಲ. ಇನ್ನು ಕೆಲವು ಆಟಗಳಿಗೆ ಮಕ್ಕಳು ತಮ್ಮ ಮನೆಯ ಪರಿಸರದಲ್ಲಿ ಸಿಗುವ ವಸ್ತುಗಳಿಂದ ಆಟದ ಪರಿಕರಗಳನ್ನು ತಯಾರಿಸಿಕೊಳ್ಳ ಬಹುದು. ಉದಾಹರಣೆಗೆ, ಚಿನ್ನಿ-ದಾಂಡು, ಬಿಲ್ಲು-ಬಾಣ ಆಟಗಳು. ಇನ್ನು ಕೆಲವು ಆಟಗಳಿಗೆ ತೀರಾ ಕಡಿಮೆ ಬೆಲೆಯಲ್ಲಿ ಅಗತ್ಯವಾದ ಪರಿಕರಗಳನ್ನು ಖರೀದಿಸಬಹುದು. ಉದಾಹರಣೆಗೆ ಗೋಲಿ ಆಟ, ಬುಗರಿ ಆಟ.

ಗೋಲಿ ಆಟ: ಇದನ್ನು ಆಡಲು ಬೇಕಾದ ಬಣ್ಣಬಣ್ಣದ ಗೋಲಿಗಳನ್ನು ಅಂಗಡಿಗಳಿಂದ ಖರೀದಿಸಬಹುದು.

ಆಟ ಆಡುವ ವಿಧಾನ: ಪ್ರತಿಯೊಬ್ಬ ಆಟಗಾರನು ಒಂದು ಗೋಲಿ ತರಬೇಕು. ಆಟವಾಡುವ ಜಾಗದಲ್ಲಿ ಒಂದು ಮರದ ಕಡ್ಡಿಯಿಂದ ಒಂದು ಗುಳಿ ಮಾಡಬೇಕು. ಆ ಗುಳಿಯಿಂದ ಆರು ಅಡಿ ದೂರದಲ್ಲಿ ಆಟಗಾರ ಮಂಡಿಯೂರಿ ಕುಳಿತುಕೊಳ್ಳಬೇಕು. ಗೋಲಿಯನ್ನು ಎಡಗೈ ತೋರುಬೆರಳು ಮತ್ತು ಬಲಗೈ ಬೆರಳುಗಳಿಂದ ಹಿಡಿದುಕೊಳ್ಳಬೇಕು. ಬಲಗೈ ತೋರುಬೆರಳಿನಿಂದ ಎಡಗೈ ತೋರುಬೆರಳನ್ನು (ಗೋಲಿಯ ಸಹಿತ) ಹಿಂದಕ್ಕೆ ಬಿಲ್ಲಿನ ಹೆದೆಯಂತೆ ಎಳೆದುಕೊಂಡು, ನಂತರ ಬಿಟ್ಟು ಬಿಡಬೇಕು. ಈಗ ಆ ಗೋಲಿ ಗುಳಿಯ ಕಡೆಗೆ ಹಾರುತ್ತದೆ. ಗೋಲಿ ಅಲ್ಲಿನ ಗುಳಿಯ ಆಚೆಗೂ ಹೋಗಿ ಬೀಳಬಹುದು. ಇದಲ್ಲದೆ, ಗುಳಿಯ ದಾರಿಯಲ್ಲಿ ಇತರ ಆಟಗಾರರ ಗೋಲಿ ಇದ್ದರೆ, ಅವನ್ನು ಆ ದಾರಿಯಿಂದ ಆಚೆಗೆ ಹೊಡೆದು ಹಾಕಬೇಕು. ಅಥವಾ ದಾರಿಗೆ ಅಡ್ಡವಾಗಿರುವ ಗೋಲಿಯನ್ನು ಆಟಗಾರ ತನ್ನ ಗೋಲಿಯಿಂದ ಹೊಡೆದು ಅದನ್ನೂ ತನ್ನ ಗೋಲಿಯೊಂದಿಗೆ ಗುಳಿಗೆ ನೂಕಬೇಕು.

ಪ್ರತಿಯೊಬ್ಬ ಆಟಗಾರನು ತನ್ನ ಸರದಿಗೆ ಕಾದು ಆಟವಾಡಬೇಕು. ಈ ಆಟದಲ್ಲಿ ಗೆಲ್ಲುವುದು ಯಾರು? ಇತರ ಎಲ್ಲಾ ಆಟಗಾರರ ಗೋಲಿಗಳನ್ನು ಯಾರು ಮೊದಲು ಗುಳಿಗೆ ಹಾಕುತ್ತಾನೋ ಅವನೇ ಆಟದಲ್ಲಿ ಗೆಲ್ಲುತ್ತಾನೆ. ಇದನ್ನು ಸಾಧಿಸಲು ಎರಡು - ಮೂರು ಗಂಟೆ ಆಟವಾಡಬೇಕಾಗುತ್ತದೆ!

ಬಿಲ್ಲುಬಾಣ: ಇದು ಎಲ್ಲರಿಗೂ ಗೊತ್ತಿರುವ ಆಟ. ಇದನ್ನು ಆಡಲು ಬಿಲ್ಲು ಮತ್ತು ಬಾಣಗಳನ್ನು ತಯಾರಿಸಿ ಕೊಳ್ಳಬೇಕು. 3 - 4 ಅಡಿ ಉದ್ದದ ಬಿದಿರಿನ ಕೋಲು ತುಸು ಬಾಗಿಸಿ, ಅದರ ಎರಡೂ ತುದಿಗಳಿಗೆ ಒಂದು ಹಗ್ಗ ಬಿಗಿದರೆ ಬಿಲ್ಲು ತಯಾರು. ಹಾಗೆಯೇ, ಬಿದಿರಿನ ಕೋಲುಗಳಿಂದ ಹತ್ತಾರು ಬಾಣಗಳನ್ನು ತಯಾರಿಸಿ. ಕಂಪೌಂಡಿನ ಗೋಡೆಯಲ್ಲಿ ಅಥವಾ ಅಗಲವಾದ ಮರದ ಕಾಂಡದಲ್ಲಿ ಒಂದು ಗುರಿ (ಟಾರ್ಗೆಟ್) ಗುರುತಿಸಿ.

ಆ ಗುರಿಗೆ ಆಟಗಾರರು ಸರದಿಯಲ್ಲಿ ನಿಗದಿತ ಅವಧಿಯಲ್ಲಿ (10 - 15 ನಿಮಿಷ) ಬಾಣಗಳನ್ನು ಹೊಡೆಯಬೇಕು. ನಿಗದಿತ ಅವಧಿಯಲ್ಲಿ ಯಾರು ಅತಿ ಹೆಚ್ಚು ಬಾಣಗಳನ್ನು ಕರಾರುವಾಕ್ಕಾಗಿ ಗುರಿಗೆ ಹೊಡೆಯುತ್ತಾರೋ ಅವರೇ ಈ ಆಟದಲ್ಲಿ ಗೆದ್ದಂತೆ. ಈಗಂತೂ ಆಟಿಕೆಗಳ ಅಂಗಡಿಗಳಲ್ಲಿ ರೆಡಿ-ಮೇಡ್ ಬಿಲ್ಲುಬಾಣಗಳು ಸಿಗುತ್ತವೆ. ಅವನ್ನು ಖರೀದಿಸಿ ಆಟವಾಡಬಹುದು.

ಪಲ್ಟಿ ಆಟ: ಆರಂಭ ಮತ್ತು ಮುಕ್ತಾಯ ಎಂದು ಗುರುತಿಸಿದ ಎರಡು ಬಿಂದುಗಳ ನಡುವೆ ಪಲ್ಟಿ ಹೊಡೆಯುವ ಆಟ. ಆ ಬಿಂದುಗಳ ನಡುವೆ ಅತಿ ಹೆಚ್ಚು ಪಲ್ಟಿ ಹೊಡೆಯುವವನೇ ಈ ಆಟದಲ್ಲಿ ಗೆಲ್ಲುತ್ತಾನೆ. ಒಂದು ಎಚ್ಚರಿಕೆ: ಇದರಲ್ಲಿ ಭಾಗವಹಿಸಬೇಕಾದರೆ, ಮನೆಯಲ್ಲಿ ಹಾಸಿಗೆಯಲ್ಲಿ ಪಲ್ಟಿ ಹೊಡೆದು ಚೆನ್ನಾಗಿ ಅಭ್ಯಾಸ ಮಾಡುವುದು ಅಗತ್ಯ. ಇಲ್ಲವಾದರೆ, ಸಮತೋಲನ ತಪ್ಪಿ ಕುತ್ತಿಗೆಗೆ ಹಾನಿ ಆದೀತು. ಚೆನ್ನಾಗಿ ಅಭ್ಯಾಸ ಮಾಡಿದ ಮಕ್ಕಳು ಈ ಆಟವನ್ನು ಉತ್ಸಾಹದಿಂದ ಆಡಬಲ್ಲರು.

ಮರ ಮುಟ್ಟುವ ಆಟ: ಸುಲಭವಾದ ಈ ಆಟ ಆಡಲು ಇಬ್ಬರು ಆಟಗಾರರು ಅಗತ್ಯ. ಒಬ್ಬನು ಓಡುವವನು, ಇನ್ನೊಬ್ಬ ಅಟ್ಟಿಸಿಕೊಂಡು ಹೋಗುವವನು. ಓಡುವವನು ಒಂದು ಮರವನ್ನು ಅಥವಾ ಗಿಡವನ್ನು ಅಥವಾ ಮನೆಯ ಗೇಟನ್ನು (ಒಂದಾದ ನಂತರ ಒಂದರಂತೆ) ಕೈಯಿಂದ ಮುಟ್ಟುತ್ತಾ ಓಡುತ್ತಿರಬೇಕು (ಅಟ್ಟಿಸಿಕೊಂಡು ಬರುವವನ ಕೈಗೆ ಸಿಗದಂತೆ).

ಅವನು ಹೀಗೆ ಓಡುತ್ತಿರುವಾಗ, ಎರಡನೆಯವನು ಅವನನ್ನು ಅಟ್ಟಿಸಿಕೊಂಡು ಹೋಗುತ್ತಾ, ಓಡುವವನು ಮರ, ಗಿಡ ಅಥವಾ ಗೇಟು ಮುಟ್ಟದಿರುವ ಸಮಯದಲ್ಲಿ ಅವನನ್ನು ಹಿಡಿಯಬೇಕು; ಆಗ ಓಡುವವನು ಆಟದಲ್ಲಿ ಸೋತು, ಅಟ್ಟಿಸಿಕೊಂಡು ಬಂದವನು ಗೆದ್ದ ಎಂಬಲ್ಲಿಗೆ ಆಟದ ಮೊದಲ ಹಂತ ಮುಕ್ತಾಯ.

ಅನಂತರ ಎರಡನೆಯ ಹಂತದಲ್ಲಿ, ಅಟ್ಟಿಸಿಕೊಂಡವನು ಓಡಬೇಕು ಮತ್ತು ಆಗ ಓಡಿದವನು ಈಗ ಅಟ್ಟಿಸಿಕೊಂಡು ಹೋಗಬೇಕು. ಹಳ್ಳಿಪಟ್ಟಣಗಳ ಗಲ್ಲಿಗಳಲ್ಲಿ ಓಡುವಾಗ ಜಾಣತನದಿಂದ ಮತ್ತು ವೇಗವಾಗಿ ಓಡಬಲ್ಲವರು, ಅಟ್ಟಿಸಿಕೊಂಡು ಬರುವವನ ಕೈಗೆ ಸಿಗದೆ ಈ ಆಟದಲ್ಲಿ ಗೆಲ್ಲುತ್ತಾರೆ.

ಕುಂಟೆಬಿಲ್ಲೆ: ಇದು ಹುಡುಗಿಯರ ಅಚ್ಚುಮೆಚ್ಚಿನ ಆಟ. ಹುಡುಗರೂ ಇದನ್ನು ಆಡುತ್ತಾರೆ. ಇದನ್ನು ಆಡಲು ಬೇಕಾದದ್ದು ಒಂದೂವರೆ ಅಂಗುಲ ಅಗಲದ ಗುಂಡಗಿನ ಮತ್ತು ಚಪ್ಪಟೆ ಕಲ್ಲು.

ಆಟವಾಡುವ ವಿಧಾನ: ನೆಲದಲ್ಲಿ 9 ಅಡಿ ಉದ್ದ, ಐದಾರು ಅಡಿ ಅಗಲದ ಆಯತಾಕಾರ ಗುರುತಿಸಬೇಕು. ಅದನ್ನು ಒಂದಡಿ ಅಗಲದ ಬೇರೆಬೇರೆ ಕೋಣೆಗಳಾಗಿ ವಿಭಾಗಿಸಿ, ಗೆರೆ ಎಳೆಯಬೇಕು. ನಡುವಣ ನಾಲ್ಕು ಕೋಣೆಗಳ ವಿರುದ್ಧ ಮೂಲೆಗಳನ್ನು ಜೋಡಿಸುವಂತೆ ಗೆರೆ (ಕರ್ಣ ರೇಖೆ) ಎಳೆದು, ಅಲ್ಲಿ ನಾಲ್ಕು ತ್ರಿಕೋನ ರಚಿಸಬೇಕು. ಗಮನಿಸಿ: ಈ ತ್ರಿಕೋನಗಳ ಕೆಳಭಾಗದಲ್ಲಿ ಮತ್ತು ಮೇಲ್-ಭಾಗದಲ್ಲಿ ಮೂರು ಸಮಾಂತರ ಕೋಣೆಗಳು ಇರುತ್ತವೆ.

ಆಟಗಾರರು ಒಬ್ಬೊಬ್ಬರಾಗಿ ಒಂದು ಕಾಲಿನಲ್ಲಿ ನಿಂತು ಕುಪ್ಪಳಿಸುತ್ತಾ ಆಟದ ಕಲ್ಲನ್ನು, ಕಾಲಿನ ಹೆಬ್ಬೆರಳಿನಿಂದ ತಳ್ಳುತ್ತಾ ಮುಂದಕ್ಕೆ ಒಯ್ಯಬೇಕು. ಮೊದಲ ಮೂರು ಕೋಣೆಗಳ ಮೂಲಕ ಆಟದ ಕಲ್ಲನ್ನು ದಾಟಿಸಿ, ನಂತರ ನಾಲ್ಕು ತ್ರಿಕೋನ ಕೋಣೆಗಳು, ಅನಂತರ ಕೊನೆಯ ಮೂರು ಕೋಣೆಗಳಾಚೆಗೆ ಆಟದ ಕಲ್ಲನ್ನು ಹೆಬ್ಬೆರಳಿನಿಂದ ದಾಟಿಸಬೇಕು. ನೆಲದಲ್ಲಿ ಗುರುತಿಸಿದ ಎಲ್ಲ ಕೋಣೆಗಳ ಮೂಲಕ ಆಟದ ಕಲ್ಲನ್ನು ಕಾಲಿನ ಹೆಬ್ಬೆರಳಿನಿಂದ ಮೊದಲು ದಾಟಿಸಿದವಳೇ ಆಟದಲ್ಲಿ ಗೆಲ್ಲುತ್ತಾಳೆ.

ಟಯರ್ ಉರುಳಿಸುವುದು: ಇದನ್ನು ಆಡಲು ಹಳೆಯ ಸ್ಕೂಟರ್, ಮೋಟಾರ್-ಬೈಕ್ ಅಥವಾ ಸೈಕಲ್ ಟಯರ್ ಮತ್ತು ಒಂದಡಿ ಉದ್ದದ ಮರದ ಕೋಲು ಸಾಕು. ಪ್ರತಿಯೊಬ್ಬ ಆಟಗಾರ ಒಂದು ಹಳೆಯ ಟಯರ್ ತರಬೇಕು. ಎಲ್ಲ ಆಟಗಾರರೂ ಸಾಲಾಗಿ ನಿಂತು ತಮ್ಮ ತಮ್ಮ ಟಯರುಗಳನ್ನು ನೆಲಕ್ಕೆ ಲಂಬವಾಗಿ ಇಟ್ಟು, ಅದಕ್ಕೆ ಮರದ ಕೋಲಿನಿಂದ ಹೊಡೆಯುತ್ತಾ ಅದನ್ನು ಉರುಳಿಸುತ್ತಾ ಮುಂದಕ್ಕೆ ಸಾಗಬೇಕು. ಟಯರ್ ಅಡ್ಡಕ್ಕೆ ಬೀಳಿಸಿದವರೆಲ್ಲ ಆಟದಿಂದ ಹೊರಕ್ಕೆ ಹೋಗಬೇಕು. ಅತೀ ಹೆಚ್ಚು ಸಮಯ ತಮ್ಮ ಟಯರನ್ನು ನೆಲಕ್ಕೆ ಲಂಬವಾಗಿ ಉರುಳಿಸಿಕೊಂಡು ಮುಂದಕ್ಕೆ ಸಾಗಿದವರೇ ಈ ಆಟದಲ್ಲಿ ಗೆಲ್ಲುತ್ತಾರೆ.

ಜೋಕಾಲಿ: ರಜಾ ಸಮಯದಲ್ಲಿ ಮನೆಯ ಹತ್ತಿರದ ಮರಕ್ಕೆ ಜೋಕಾಲಿ ಕಟ್ಟಿ ತೂಗುವುದು ಹುಡುಗಿಯರಿಗೆ ಇಷ್ಟವಾದ ಆಟ. ಜೋಕಾಲಿಯಲ್ಲಿ ಕುಳಿತವಳನ್ನು ಇನ್ನೊಬ್ಬಳು ನೆಲದಲ್ಲಿ ನಿಂತು ಆರಂಭದಲ್ಲಿ ತೂಗುತ್ತಾಳೆ. ಅನಂತರ ಜೋಕಾಲಿಯಲ್ಲಿ ಕುಳಿತವಳು ಜೀಕಿನಿಂದ ಜೀಕಿಗೆ ಜೋಕಾಲಿಯನ್ನು ಇನ್ನಷ್ಟು ಮತ್ತಷ್ಟು ಎತ್ತರಕ್ಕೆ ತೂಗಿಕೊಳ್ಳುತ್ತಾಳೆ. ಉಳಿದೆಲ್ಲರಿಗಿಂತ ಹೆಚ್ಚಿನ ಎತ್ತರಕ್ಕೆ ಜೋಕಾಲಿಯನ್ನು ತೂಗಿಕೊಂಡ ಹುಡುಗಿಯೇ ಈ ಆಟದಲ್ಲಿ ಗೆಲ್ಲುವವಳು.


ಕಣ್ಣುಮುಚ್ಚಾಲೆ, ಚಿನ್ನಿದಾಂಡು, ಬುಗರಿ, ಕಬಡ್ಡಿ – ಇಂತಹ ಇನ್ನೂ ಅನೇಕ ಬೀದಿಯಾಟಗಳು ಜನಪ್ರಿಯ. ರಜಾಕಾಲದಲ್ಲಿ ಇಂತಹ ಐದಾರು ಆಟಗಳನ್ನು ಕಲಿತು, ಆಯಾ ವಠಾರದ ಮಕ್ಕಳೊಂದಿಗೆ ಆಡುತ್ತಿದ್ದರೆ ಒಂದೆರಡು ತಿಂಗಳ ರಜಾ ಮುಗಿದೇ ಹೋಗುತ್ತದೆ, ಅಲ್ಲವೇ?

ಆಧಾರ: ನ್ಯಾಷನಲ್ ಬುಕ್ ಟ್ರಸ್ಟ್ ಪ್ರಕಟಿಸಿದ ''ಭಾರತದ ಕೆಲವು ಬೀದಿಯಾಟಗಳು''

**- ಅಡ್ಡೂರು** ಕೃಷ್ಣ ರಾವ್




# ಸೃಜನಸಿರಿ ನಿರ್ದೇಶಕಿ ಶ್ರೀಮತಿ ಮಂಗಳ ವೆಂಕಟೇಶ್ ಬ್ಲಡಿ ಸಿಸ್ಟಂ ನಾಟಕ




ಹಾಸನದ ಶ್ರೀ ರಮ್ಯ ಕಲಾ ವೃಂದದವರು ಬಹಳ ಹಿಂದೆ ಕಲಾಭವನದಲ್ಲಿ (ಈಗ ಅದೆ ಹಾಸನಾಂಬ ಕಲಾಕ್ಷೇತ್ರ ಆಗಿದೆ) ಪ್ರದರ್ಶಿಸಿದ ಸಂಗೊಳ್ಳಿ ರಾಯಣ್ಣ ಐತಿಹಾಸಿಕ ನಾಟಕದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಪಾತ್ರದಲ್ಲಿ ನಟಿಸಿದವರು ಹಾಸನದ ಶ್ರೀಮತಿ ಮಂಗಳ ವೆಂಕಟೇಶ್ ಅವರು. ಈ ನಾಟಕ ನಿರ್ದೇಶಿಸಿದ್ದವರು ರಮ್ಯ ಕಲಾರಂಗದ ಹೆಚ್.ರಾಮಣ್ಣ. ಮಂಗಳ ಮೇಡಂ ಶಾಲೆಯ ದಿನಗಳಿಂದಲೇ ಅಭಿನಯದ ಬಗ್ಗೆ ಆಸಕ್ತಿ ಬೆಳೆಸಿಕೊಂಡು ವೇದಿಕೆ ಏರಿದವರು. ಮೈಸೂರು ಜಿಲ್ಲೆ ಬಿಳಿಕೆರೆ ಗ್ರಾಮದ ರಾಮಚಂದ್ರರಾವ್ ಮತ್ತು ಕಮಲಮ್ಮ ದಂಪತಿಗಳ ಸುಪುತ್ರಿ, ಇವರು 10ನೇ ತರಗತಿವರೆಗೆ ಬಿಳಿಕೆರೆ ಸರ್ಕಾರಿ ಪ್ರೌಢಶಾಲೆಯಲ್ಲಿ ಓದಿ, ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಬಿ.ಎ. ಪದವಿ ನಂತರ ಮಾನಸ ಗಂಗೋತ್ರಿಯಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಓದಿನ ದಿನಗಳಲ್ಲೇ ತಮ್ಮ ಅಭಿನಯ ಸಾಧನೆಗೆ ಬಹುಮಾನ ಗೆದ್ದವರು. ಹಾಸನ ಎಂ.ಸಿ.ಇ. ಇಂಜಿನಿಯರಿಂಗ್ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿರುವ ಡಾ.ಸಿ.ವಿ. ವೆಂಕಟೇಶ್‌ರವರ ಧರ್ಮಪತ್ನಿ. ಮೇಡಂಗೆ ವೆಂಕಟೇಶ್ ಸರ್ ಮನೆಯಲ್ಲಿ ಪ್ರಾಕ್ಟೀಸ್ ನಡೆಯುತ್ತಿದ್ದರೂ ಬೇಸರಿಸದೆ ಉತ್ತೇಜನ ಪ್ರೋತ್ಸಾಹ ನೀಡುತ್ತಿದ್ದರು. ಸೃಜನಸಿರಿ ವನಿತಾವೃಂದ ಎಂಬ ಮಹಿಳಾ ಸಂಘ ಸ್ಥಾಪಿಸಿ ಮಹಿಳೆಯರನ್ನು ಕಲೆಹಾಕಿ ನಾಟಕ ಕಲಿಸಿದವರು. ನಾಟಕ ಪ್ರದರ್ಶನ ಏರ್ಪಾಡಿನ ಜೊತೆಗೆ ನಿರ್ದೇಶನ ಹೊಣೆಯನ್ನು ನಿರ್ವಹಿಸುತ್ತಾ ಹಾಸನದ ಈಗಿನ ಸಿಟಿ ಬಸ್ ನಿಲ್ದಾಣ ರಸ್ತೆಯ ಸನಿಹದ ಶ್ರೀ ಗಣಪತಿ ಪೆಂಡಾಲ್‌ನ ಗಣೇಶೋತ್ಸವದಲ್ಲಿ ಪೌರಾಣಿಕ ನಾಟಕ ಪ್ರದರ್ಶಿಸುತ್ತಾ ತಮ್ಮ ಛಾಪು ಮೂಡಿಸಿದ್ದರು. ನಟನೆಯಲ್ಲಿ ಆಸಕ್ತಿ ವಹಿಸಿ ಬಂದ ವನಿತೆಯರಿಂದ ಧೀರ ದುರ್ಯೋಧನ ನಾಟಕ ಪ್ರದರ್ಶಿಸಿದ್ದರು. ಇದು ಚಂದ್ರಕಾಂತ ಪಡೇಸೂರ್ ನಾಟಕ. ಇವರ ಇನ್ನೊಂದು ನಾಟಕ ಹೋಳಿ ಹುಣ್ಣಿಮೆ ಕೂಡ ರಂಗದ ಮೇಲೆ ತಂದಿದ್ದಾರೆ. ದಿವಂಗತ ಡಾ.ಮಳಲಿ ವಸಂತಕುಮಾರ್ ಅವರು ತಮ್ಮ ಶರ್ಮಿಷ್ಠೆ ನಾಟಕವನ್ನು ನನಗೆ ಕಳಿಸಿ ಓದಿ ಬರೆಯಲು ಕೇಳಿದ್ದರು. ನಾನು ನಾಟಕ ಓದಿ ಮೇಡಂಗೆ ನೀಡಿ ಅವರು ರಂಗದ ಮೇಲೆ ತಂದರು. ಗಣಪತಿ ಪೆಂಡಾಲ್‌ನಲ್ಲಿ ಪ್ರದರ್ಶನಗೊಂಡಾಗ ನಾಟಕ ನೋಡಲು ಮೈಸೂರಿನಿಂದ ಆಗಮಿಸಿ ಬಂದಿದ್ದ ಮಳಲಿಯವರು ಗೊರೂರು ತುಂಬಾ ಥ್ಯಾಂಕ್ಸ್.. ಎಂದು ಪಕ್ಕದಲ್ಲಿ ಕುಳಿತು ನಾಟಕ ವೀಕ್ಷಿಸುತ್ತಿದ್ದ ನನ್ನ ಕಿವಿಯಲ್ಲಿ ಹೇಳಿದ್ದು ಇಂದಿಗೂ ಗುಯ್ಯಂಗುಡುತ್ತಿದೆ. ಚನ್ನರಾಯ ಪಟ್ಟಣ ತಾ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷಿಣಿಯಾಗಿದ್ದ ಶ್ರೀಮತಿ ಎ.ಜಿ.ರತ್ನಕಾಳೇಗೌಡರು ಬೆಂಗಳೂರು ನಗರ ನಿರ್ಮಾತೃ 1ನೇ ಕೆಂಪೇಗೌಡನ ಸೊಸೆ ಲಕ್ಷ್ಮೀದೇವಿ ಕೋಟೆ ಕಟ್ಟುವಿಕೆಯಲ್ಲಿ ತಾನೇ ಆತ್ಮಾಹುತಿ ಆಗುವ ಕಥಾವಸ್ತುವಿನ ಆತ್ಮಾಹುತಿ ನಾಟಕವನ್ನು ನನ್ನ ಓದಿಗೆ ಕಳಿಸಿದ್ದರು. ಅದನ್ನು ಮಂಗಳ ಮೇಡಂಗೆ ನೀಡಿ ಅವರು ಹಾಸನ ಸಂಗಮೇಶ್ವರ ಬಡಾವಣೆಯ ಶಿವಪಾರ್ವತಿ ದೇವಸ್ಥಾನದಲ್ಲಿ ಪ್ರದರ್ಶಿಸಿದ್ದರು. ಬೆಂಗಳೂರಿನಿಂದ ನಾಟಕ ನೋಡಲು ರತ್ನ ಮೇಡಂ ಬಂದು ಆನಂದ ಹಂಚಿಕೊಂಡಿದ್ದರು. ಚನ್ನರಾಯಪಟ್ಟಣದ ನಟ ಎ.ಜಿ.ರಾಜು ಅವರ ಭುವನ ಸಾರ್ವಭೌಮ ನಾಟಕವನ್ನು ಹಾಸನದ ಫೀರ್ದೋಸ್ ಮಹಿಳಾ ಸಮಾಜದ ಮೇಡಂ ತಮ್ಮ ಮಗಳಿಂದ ಆಂಗ್ಲಭಾಷೆಗೆ ಅನುವಾದಿಸಿ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದಿಂದ ನಾಟಕ ಪ್ರದರ್ಶನಕ್ಕೆ ಒಪ್ಪಿಗೆ ಪಡೆದು ಹಾಸನದ ಕಲಾಭವನದಲ್ಲಿ ಪ್ರದರ್ಶಿಸಿದೆವು. ಹಾಸನದ ಲೇಖಕಿ ಶ್ರೀವಿಜಯಹಾಸನ್ ಅವರ ಆರು ಪೌರಾಣಿಕ ನಾಟಕಗಳನ್ನು ರಂಗದ ಮೇಲೆ ತಂದಿದ್ದಾರೆ. ಶಿವ ಜಲಂದರ, ಉಷಾ ಸ್ವಯಂವರ, ನಾಟ್ಯರಾಣಿ ಶಾಂತಲೆ ಈ ನಾಟಕಗಳನ್ನು ನೋಡಿ ವಿಮರ್ಶೆ ಬರೆದಿದ್ದೇನೆ. 2020ರಲ್ಲಿ ಪ್ರಕಟಿತ ನನ್ನ ರಂಗನೇಪಥ್ಯ ಕೃತಿಯಲ್ಲಿ ಇವು ದಾಖಲಾಗಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಲಾ ಪ್ರತಿಭೋತ್ಸವದಲ್ಲಿ ದೀರದುರ್ಯೋಧನ ನಾಟಕಕ್ಕೆ ವಲಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ನನ್ನ (ಗೊರೂರು ಅನಂತರಾಜು) ವ್ಯವಸ್ಥೆ ರಾಜಕೀಯ ವಿಡಂಬನಾ ನಾಟಕವನ್ನು ನಿರ್ದೇಶಿಸಿ ಜಿಲ್ಲಾ ಮತ್ತು ವಲಯ ಮಟ್ಟದಲ್ಲಿ ವಿಜೇತರಾಗಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಯಶಸ್ವಿ ಪ್ರದರ್ಶನ ನೀಡಿದ್ದರು. ಯುವ ಜನಸೇವಾ ಮತ್ತು ಕ್ರೀಡಾ ಇಲಾಖೆ ನಡೆಸುತ್ತಿದ್ದ ಇಂಗ್ಲೀಷ್ ನಾಟಕ ಸ್ಪರ್ಧೆಗೆ ಸಿರಿಗನ್ನಡ ಸಂಸ್ಥಾಪಕ ಅಧ್ಯಕ್ಷರು ದಿವಂಗತ ಎಂ.ಎಸ್. ವೆಂಕಟರಾಮಯ್ಯ ಅವರು ನನ್ನ ವ್ಯವಸ್ಥೆ ನಾಟಕವನ್ನು ಬ್ಲಡಿ ಸಿಸ್ಟಂ ಎಂದು ಆಂಗ್ಲಭಾಷೆಗೆ ಅನುವಾದಿಸಿ ಈ ನಾಟಕವನ್ನು ಹಾಸನದ ಎಂ.ಸಿ.ಇ. ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೆ ಮೇಡಂ ನಿರ್ದೇಶಿಸಿದ್ದರು. ಈ ಪ್ರಯೋಗದಲ್ಲಿ ಇವರ ಮಗಳು ದೀಪ್ತಿ ವೆಂಕಟೇಶ್ ನಟಿಸಿ ಕಾಲೇಜು ತಂಡವನ್ನು ಸಂಘಟಿಸಿದ್ದರು.

ಹಾಸನ ಜಿಲ್ಲಾ ಕ.ಸಾ.ಪ ಗೌ.ಕಾರ್ಯದರ್ಶಿಯಾಗಿ ನಾನು ತೆರವು ಮಾಡಿಕೊಟ್ಟ ಸ್ಥಾನವನ್ನು ಶ್ರೀಮತಿ ಮಂಗಳ ವೆಂಕಟೇಶ್ ವಹಿಸಿಕೊಂಡು ಉದಯರವಿ ಕಾಲದಲ್ಲಿ ಯಶಸ್ವಿಯಾಗಿ ನಿಭಾಯಿಸಿ ಪರಿಷತ್ ಆವರಣದಲ್ಲಿ ಈಗಿರುವ ಕುವೆಂಪು ಪ್ರತಿಮೆ ಪ್ರತಿಷ್ಠಾನ ಫಲಕದಲ್ಲಿ ಮೇಡಂ ಹೆಸರಿದೆ. ಕರೋನ ವಿಶ್ವವನ್ನು ಕಾಡಿದಂತೆ ಮೇಡಂ ಅವರನ್ನು ಕಾಡಿತು. ಈ ಭಯದಲ್ಲಿಯೇ ನಿಧನರಾದ ಅವರ ಜನ್ಮದಿನ (13-5-2026) ಮೇಡಂ ಅವರ ಶಿಷ್ಯವೃಂದ ಸ್ಮರಣೆ ಕಾರ್ಯಕ್ರಮ ಏರ್ಪಡಿಸಿ ಹೀಗೆ ಗತಿಸಿಹೋದ ದಿನಗಳು ನೆನಪಾದವು.

**- ಗೊರೂರು ಅನಂತರಾಜು,** ಹಾಸನ.





## ಶನಿವಾರ ನಾವೇಕೆ ಆಂಜನೇಯನನ್ನು ಆರಾಧಿಸಬೇಕು?

ಸುಮಾರು ಜನ ಶನಿವಾರ ಬಂದರೆ, ಎಲ್ಲರೂ ಆಂಜನೇಯನ ದೇವಸ್ಥಾನಕ್ಕೆ ಹೋಗಿ ಆಂಜನೇಯನ ದರ್ಶನ ಮಾಡಿಬರುತ್ತಾರೆ. ಈಗ ಎಲ್ಲಾ ಕಡೆ ಈ ರಾಮಭಂಟನ ದೇವಾಲಯಗಳು ಇವೆ. ಹಿಂದೆಯೂ ಸಹ ಊರ ಹೊರಗೆ ಒಂದು ಆಂಜನೇಯನ ದೇವಸ್ಥಾನವನ್ನು ನಮ್ಮ ಹಿರಿಯರು ನಿರ್ಮಿಸಿಟ್ಟಿರುತ್ತಿದ್ದರು.

**ಶನಿವಾರ ನಾವೇಕೆ ಆಂಜನೇಯನ ದೇವಸ್ಥಾನಕ್ಕೆ ಹೋಗುತ್ತೇವೆ?**

ಶನಿ ಒಂದೆರಡು ಅಪರೂಪವಾದ ವರವನ್ನು ಆಂಜನೇಯನಿಗೆ ಪ್ರಸಾದಿಸಿದ್ದ. ಆ ಕುತೂಹಲಕಾರಿ ಘಟನೆಗಳನ್ನು ಇಂದು ನಾವು ತಿಳಿದುಕೊಳ್ಳೋಣ.

ತ್ರೇತಾಯುಗದಲ್ಲಿ ರಾವಣನು ಬ್ರಹ್ಮ ಮತ್ತು ಶಿವನ ವರ ಪ್ರಸಾದದಿಂದ ಎಲ್ಲಾ ಲೋಕಗಳನ್ನು ಗೆದ್ದಿದ್ದನು. ಅಲ್ಲದೆ ಆತ ನವಗ್ರಹಗಳನ್ನು ಜಯಿಸಿ, ತನ್ನ ಸಿಂಹಾಸನವನ್ನೇರುವ ಮೆಟ್ಟಿಲುಗಳಾಗಿ ಅವರನ್ನು ನೇಮಿಸಿಕೊಂಡನು. ಹೀಗೆ ಇದ್ದಾಗ ರಾವಣನ ಪತ್ನಿ ಮಂಡೋದರಿ ರಾವಣನ ಮಗನಾದ ಮೇಘನಾದನಿಗೆ ಜನ್ಮ ನೀಡುವ ಕಾಲ ಬಂದಿತು. ಆಗ ಮಹಾ ಜ್ಯೋತಿಷ್ಯಜ್ಞನಾದ ರಾವಣನು ಎಲ್ಲಾ ಗ್ರಹಗಳನ್ನು ಆತನ ಜನ್ಮಕುಂಡಲಿಯ 11ನೇ ಮನೆಯಲ್ಲಿ ಹೋಗಿ ನೆಲೆಸುವಂತೆ ಆದೇಶ ನೀಡಿದನು. ಇದರಿಂದ ತನ್ನ ಮಗ ಅಮರನಾಗುತ್ತಾನೆ ಎಂಬ ಆಸೆ ರಾವಣನದಾಗಿತ್ತು.

ಆದರೆ ಇದು ದೇವತೆಗಳಲ್ಲಿ ಭಯವನ್ನುಂಟು ಮಾಡಿತು. ಆಗ ಇದನ್ನು ಅರಿತು ಮಗು ಜನಿಸುವಾಗ ಶನಿ ಉಚ್ಚ ಸ್ಥಾನದಲ್ಲಿ ಕೂರುವ ಬದಲು ಮೇಘನಾದನ ಕುಂಡಲಿಯಲ್ಲಿ ನೀಚ ಸ್ಥಾನನಾಗಿ ಕುಳಿತು, 12ನೆಯ ಮನೆಯವರೆಗು ಕಾಲು ಚಾಚಿ ಬಿಟ್ಟನು.

ಇದು ರಾವಣನಿಗೆ ತಿಳಿಯಲು ಹೆಚ್ಚು ಸಮಯವಾಗಲಿಲ್ಲ, ಏಕೆಂದರೆ ಶನಿಯ ಈ ನಡೆ ತನ್ನ ಮಗನ ಸಾವಿಗೆ ಕಾರಣನಾಗುತ್ತೆ ಎಂದು ಆತ ಗ್ರಹಿಸಿದನು. ಈ ಕಾರಣವಾಗಿ ಶನಿಯನ್ನು ಒಂದು ಕತ್ತಲ ಕೋಣೆಯಲ್ಲಿ ಕೂಡಿಹಾಕಿದನು. ಇದರಿಂದ ಶನಿಯ ಮುಖವನ್ನು ಯಾರೂ ನೋಡುವುದಿಲ್ಲ ಎಂಬುದು ಆತನ ಅನಿಸಿಕೆಯಾಗಿತ್ತು. ಆದರೆ ಸೀತೆಯನ್ನು ಹುಡುಕುಲು ಬಂದ ಆಂಜನೇಯನು ಆ ಕತ್ತಲ ಕೋಣೆಯಲ್ಲಿ ಇಣುಕಿ ನೋಡಿ ಶನಿಯ ಕಣ್ಣಿಗೆ ಬಿದ್ದು ಬಿಟ್ಟನು. ಆದರೆ ಶನಿಯ ಕಣ್ಣಿಗೆ ಬಿದ್ದನಲ್ಲ ಎಂಬ ಅಳುಕು ಹನುಮಂತನಿಗೂ ಸಹ ಕಾಡಿತು. ನವಗ್ರಹಗಳಲ್ಲಿ ಶನಿಯನ್ನು ಹೊರತುಪಡಿಸಿ, ಎಲ್ಲರನ್ನು ಹನುಮಂತ ಬಿಡುಗಡೆಗೊಳಿಸಿದ. ಇದನ್ನು ಶನಿ ಕೇಳಿದಾಗ, ನಿನ್ನನ್ನು ಬಿಡಿಸಿದರೆ ನೀನು ನನ್ನ ತಲೆಯ ಮೇಲೆ ಕೂರುವೆ ಎಂದು ಹನುಮಂತ ಹೇಳಿದ.

ಇದರಿಂದ ಶನಿಯು ಆತನಿಗೆ ಅಭಯವನ್ನು ನೀಡಿದ. ನಾನು ನಿನಗೆ ಸಹಾಯ ಮಾಡುವೆ ಎಂದು, ಆದರೂ ನೀನು ನನ್ನ ದೃಷ್ಟಿಗೆ ಬಿದ್ದಿದ್ದರಿಂದ, ನೀನು ಮನೆ, ಹೆಂಡತಿ ಮತ್ತು ಮಕ್ಕಳಿಂದ ದೂರವಾಗುವೆ ಎಂದು ಶನಿ ಹೇಳಿದನು. ಹಾಗಾದರೆ ಬಾ ನಾನು ನಿನ್ನನ್ನು ಬಿಡಿಸುವೆ ನನಗೆ ಮನೆ, ಮಠ, ಹೆಂಡತಿ ಮತ್ತು ಮಕ್ಕಳು ಯಾರೂ ಇಲ್ಲ, ನನಗೆ ರಾಮನ ಅಡಿದಾವರೆ ಮತ್ತು ಆತನ ನಾಮ ಬಿಟ್ಟರೆ ಬೇರೆ ಸಂಪತ್ತಿಲ್ಲ ಎಂದು ಶನಿಯನ್ನು ಬಂಧ ಮುಕ್ತಗೊಳಿಸಿದನು.

ಹೀಗೆ ಶನಿ ಕೃತಜ್ಞತಾಪೂರ್ವಕವಾಗಿ ಹನುಮಂತನನ್ನು ಯಾರೂ ಪೂಜಿಸುವವರೋ, ಅವರ ಮೇಲೆ ತನ್ನ ಪ್ರಭಾವವನ್ನು ಕಡಿಮೆ ಮಾಡುತ್ತೇನೆ ಎಂದು ಮಾತುಕೊಟ್ಟನು. ಒಂದು ನಂಬಿಕೆಯ ಪ್ರಕಾರ ಆಂಜನೇಯ ಲಂಕಾದಹನವನ್ನು ಸರಿಯಾಗಿ ಮಾಡಲಾಗಲಿಲ್ಲವಂತೆ, ಆಗ ಹನುಮಂತನ ಸಹಾಯಕ್ಕೆ ಬಂದ ಶನಿ ಲಂಕೆಯನ್ನು ನೋಡಿದ್ದರಿಂದ ಸ್ವರ್ಣಲಂಕ, ಭಸ್ಮವಾಗಿ ಕಪ್ಪು ಲಂಕಾವಾಯಿತಂತೆ.

ಮತ್ತೊಂದು ರೋಚಕ ಕತೆ ಶನಿ ಮತ್ತು ಆಂಜನೇಯನ ನಡುವೆ ನಡೆಯಿತು. ರಾಮಾಯಣ ಯುದ್ಧ ಮುಗಿದು, ಹನುಮಂತನು ಒಮ್ಮೆ ಗುಹೆಯಲ್ಲಿ ರಾಮಧ್ಯಾನ ಮಾಡುತ್ತ ಕುಳಿತಿದ್ದನು. ಆಗ ಶನಿ ಇದೇ ಸಮಯವೆಂದು ಆಂಜನೇಯನ ಹೆಗಲೇರಿದನು. ಇದರಿಂದ ರಾಮ ಧ್ಯಾನಕ್ಕೆ ಭಂಗ ಬಂದಿತು ಎಂದು ಆಂಜನೇಯನಿಗೆ ಸಿಟ್ಟು ಬಂದಿತು. ಆದರು ಅದನ್ನು ನಿಗ್ರಹಿಸಿಕೊಂಡು, ಆಂಜನೇಯ ಹೀಗೆ ಹೇಳಿದ: ಹೇ ಶನಿದೇವ, ನಿಮ್ಮ ತಂದೆಯಾದ ಸೂರ್ಯ ದೇವನು ನನಗೆ ಅನೇಕ ವರ ನೀಡಿದ್ದಾನೆ. ಆತ ನನ್ನ ಗುರು, ಗುರುವಿನ ಮಗನನ್ನು ಶಿಕ್ಷಿಸುವ ಕೆಲಸ ನನಗೆ ನೀಡಬೇಡ. ಇಳಿದು ಹೋಗಿಬಿಡು ಎಂದು ಹೇಳಿದನು.

ಅದಕ್ಕೆ ಶನಿಯು ಆಂಜನೇಯ, ಇದು ನನ್ನ ಸರದಿ, ಅದರ ಪ್ರಕಾರ ನಾನು ನಿನ್ನ ಹೆಗಲೇರಬೇಕು, ಇದು ವಿಧಿ ನಿಯಮ ಎಂದನು. ಮಾತಿಗೆ ಮಾತು ಬೆಳೆಯಿತು, ಶನಿ ಸೋಲಲಿಲ್ಲ,

ಆಗ ಆಂಜನೇಯನು ಉಗ್ರ ಸ್ವರೂಪವನ್ನು ತಾಳಿ ತನ್ನ ದೇಹವನ್ನು ಬೆಳೆಸಿದನು. ಇದರಿಂದ ಹೆಗಲ ಮೇಲಿದ್ದ ಶನಿ ಗುಹೆಯ ಛಾವಣಿ ಮತ್ತು ಆಂಜನೇಯನ ದೇಹದ ನಡುವೆ ಸಿಲುಕಿ ಅಪ್ಪಚ್ಚಿಯಾಗಿ ಹೋದನು. ಆ ನೋವನ್ನು ತಾಳಲಾರದೆ ಶನಿ ಸೋತು ಆಂಜನೇಯನನ್ನು ಅಂಗಲಾಚಿದನು. ಆಗ ಆಂಜನೇಯನು ರಾಮ ನಾಮ ಜಪ ಮಾಡುವವರ ತಂಟೆಗೆ ಹೋಗುವುದಿಲ್ಲ ಎಂದು ಮಾತು ನೀಡಿದರೆ ಮಾತ್ರ ನಿನ್ನನ್ನು ಬಿಡುತ್ತೇನೆ ಎಂದನು. ಇದಕ್ಕೆ ಶನಿಯು ಸಹ ಅಸ್ತು ಎಂದನು.

ಎಷ್ಟಾದರು ಆಂಜನೇಯನನ್ನು ಸ್ಮರಿಸಿದರೆ ರಾಮನನ್ನು ಸ್ಮರಿಸಿದಂತೆ ಅಲ್ಲವೇ.

ಹೀಗೆ ಹನುಮಂತನನ್ನು ನಾವು ಶನಿವಾರದಂದು ಪೂಜಿಸಲು ಆರಂಭಿಸಿದೆವು.

# ಚಿನ್ನ, ಬೆಳ್ಳಿ ಮೇಲಿನ ಆಮದು ಸುಂಕ ಶೇ.15ಕ್ಕೇರಿಕೆ

## ಪಶ್ಚಿಮ ಏಷ್ಯಾದಲ್ಲಿ ತಲೆದೋರಿರುವ ಸಂಘರ್ಷ ಹಿನ್ನಲೆ ಕೇಂದ್ರ ಸರ್ಕಾರದಿಂದ ನಿರ್ಧಾರ | ಗ್ರಾಹಕರಲ್ಲಿ ಮತ್ತಷ್ಟು ಆತಂಕ

• ಪ್ರಜೋದಯ ವರದಿ

**ನವದೆಹಲಿ:** ಚಿನ್ನ ಮತ್ತು ಬೆಳ್ಳಿಯ ಮೇಲಿನ ಆಮದು ಸುಂಕವನ್ನು ಕೇಂದ್ರ ಸರ್ಕಾರ ಶೇ.15 ರಷ್ಟು ಹೆಚ್ಚಳ ಮಾಡಿದೆ. ಪರಿಷ್ಕೃತ ದರ ಬುಧವಾರ ದಿಂದಲೇ ಜಾರಿಗೆ ಬಂದಿದೆ. ಪಶ್ಚಿಮ ಏಷ್ಯಾದಲ್ಲಿ ತಲೆದೋರಿರುವ ಸಂಘರ್ಷ ಬಿಕ್ಕಟ್ಟಿನ ಬೆನ್ನಲ್ಲೇ ಕೇಂದ್ರ ಸರ್ಕಾರದಿಂದ ಈ ನಿರ್ಧಾರ ಹೊರಬಿದ್ದಿದೆ. ಕೇಂದ್ರ ಸರ್ಕಾರ ಈ ಕ್ರಮದಿಂದ ಚಿನ್ನ, ಬೆಳ್ಳಿ ಧಾರಣೆ ಮತ್ತಷ್ಟು ದುಬಾರಿಯಾಗಲಿದೆ.

ದೇಶದ ವಿದೇಶಿ ವಿನಿಮಯ ಮೀಸಲಿನ ಮೇಲಿನ ಒತ್ತಡ ಕಡಿಮೆ ಮಾಡಲು ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿದೆ. ಸೋಷಿಯಲ್ ವೆಲ್‌ಫೇರ್ ಸರ್ಚಾರ್ಜ್ ಹಾಗೂ ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್ ಪರಿಷ್ಕರಿಸಲಾಗಿದ್ದು, ನೂತನ ದರ ಇಂದಿನಿಂದಲೇ ಜಾರಿಗೆ ಬರಲಿದೆ ಎಂದು ಹಣಕಾಸು ಸಚಿವಾಲಯ ಬಿಡು



ಗಡೆ ಮಾಡುವ ಪ್ರಕಟಣೆ ತಿಳಿಸಿದೆ.

ಚಿನ್ನ ಖರೀದಿಗೆ ಕಡಿವಾಣ ಹಾಕುವ ದೃಷ್ಟಿಯಿಂದ ಮತ್ತು ವಿದೇಶಿ ವಿನಿಮಯ ಉಳಿಸಲು ಕಠಿಣ ಕ್ರಮ ತೆಗೆದುಕೊಳ್ಳುವುದು ಅನಿವಾರ್ಯ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದ ಕೆಲ ದಿನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಮೇಲಿನ ಆಮದು ಸುಂಕ ಏರಿಕೆಯಾಗಿದೆ.

ಆಮದು ಸುಂಕ ಏರಿಕೆಯಿಂದಾಗಿ ಚಿನ್ನದ ದರ ಪ್ರತಿ 10 ಗ್ರಾಂಗೆ 8,838, ಪ್ರತಿ ಕೆಜಿ ಬೆಳ್ಳಿ ದರ 18,920 ಸಾವಿರ ರೂಪಾಯಿಗಳಿಗೆ ಏರಿಕೆಯಾಗಿದೆ. ಈ ವಹಿವಾಟು ಮಧ್ಯಾಹ್ನ ನಂತರ ಇನ್ನಷ್ಟು ದುಬಾರಿಯಾಗಲಿದೆ ಎಂದು ಹೇಳಲಾಗಿದೆ.

ಎಂಸಿಎಕ್ಸ್ ಚಿನ್ನದ ವ್ಯವಹಾರ ಬಹುತೇಕ ಚಿನ್ನದ ಬದಲಿಗೆ ಎಲೆಕ್ಟ್ರಾನಿಕ್ ರೂಪದಲ್ಲಿ ಚಿನ್ನದ ಬೆಲೆ ಏರಿಳಿತಗಳ ಮೇಲೆ ಫ್ಯೂಚರ್ಸ್ ಒಪ್ಪಂದ ಮೂಲಕ ವ್ಯಾಪಾರ ಮಾಡುವ ವೇದಿಕೆಯಾಗಿದ್ದು, ಇದು ಹೂಡಿಕೆದಾರರ ಚಿನ್ನದ ಬೆಲೆ ಏರಿಳಿತದಿಂದ ಲಾಭ ಪಡೆಯಲು ಅನುಕೂಲವಾಗುತ್ತದೆ.

ಚಿನ್ನವನ್ನು ಬಹುತೇಕವಾಗಿ ಖರೀದಿಸದೆ ಭವಿಷ್ಯದ ದಿನಾಂಕದಂದು ನಿಗದಿತ ಬೆಲೆಯಲ್ಲಿ ಚಿನ್ನವನ್ನು ಖರೀದಿಸಲು ಅಥವಾ ಮಾರಾಟ ಮಾಡಲು ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ರಾಜಕೀಯ ಹಾಗೂ ಆರ್ಥಿಕ ಸುದ್ದಿಗಳ ಆಧಾರದ ಮೇಲೆ ಚಿನ್ನ ಮತ್ತು ಬೆಳ್ಳಿ ಧಾರಣೆ ಬದಲಾಗುತ್ತದೆ.

ಭಾರತದ ಚಿನ್ನದ ಆಮದು ಪ್ರಮಾಣ 2025-26ರಲ್ಲಿ ಶೇ. 24 ಕ್ಕಿಂತ ಹೆಚ್ಚು ಏರಿಕೆಯಾಗಿದೆ. ಈ ಮೂಲಕ ದಾಖಲೆಯ 71.98 ಬಿಲಿಯನ್ ಡಾಲರ್ ತಲುಪಿದೆ.

### ಭಾರತದ ಬೇಡಿಕೆ ಕುಗ್ಗಬಹುದೆಂಬ ಲೆಕ್ಕಾಚಾರ

ಭಾರತವು ಚಿನ್ನ ಮತ್ತು ಬೆಳ್ಳಿಯ ಮೇಲಿನ ಆಮದು ಸುಂಕವನ್ನು ಶೇ.6% ರಿಂದ ಶೇ. 15% ಕ್ಕೆ ಹೆಚ್ಚಿಸಿದೆ. ವಿವಿಧ ಲೋಹಗಳ ವಿದೇಶಿ ಖರೀದಿಯನ್ನು ತಡೆಯುವ ಮತ್ತು ದೇಶದ ವಿದೇಶಿ ವಿನಿಮಯ ಮೀಸಲುಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಈ ಮಾದರಿಯ ಹೆಚ್ಚಿನ ಸುಂಕಗಳು ವಿಶ್ವದ ಎರಡನೇ ಅತಿದೊಡ್ಡ ಅಮೂಲ್ಯ ಲೋಹಗಳ ಗ್ರಾಹಕರ ದೇಶವಾಗಿರುವ ಭಾರತದ ಬೇಡಿಕೆಯನ್ನು ಕುಗ್ಗಿಸಬಹುದು ಎಂದು ಅಂದಾಜಿಸಲಾಗಿದೆ.

ಭಾರತದಲ್ಲಿ ಚಿನ್ನದ ವ್ಯಾಪಾರವು ಅತ್ಯಂತ ಹೆಚ್ಚಾಗಿದೆ. ಅಲ್ಲದೆ ಇತ್ತೀಚಿನ ದಿನಗಳಲ್ಲಿ ಆಭರಣ ಚಿನ್ನ ಖರೀದಿ ಹಾಗೂ ಹೂಡಿಕೆಯ ಮೇಲಿನ ಚಿನ್ನ ಖರೀದಿಯು ಹೆಚ್ಚಾಗಿದೆ. ಇದೀಗ ಭಾರತದಲ್ಲಿ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡಲು ಮತ್ತು ಏಷ್ಯಾದ ಅತ್ಯಂತ ಕಳಪೆ ಕರೆನ್ಸಿ ಎನಿಸಿಕೊಂಡಿರುವ ರೂಪಾಯಿ ಮೌಲ್ಯವನ್ನು ಬೆಂಬಲಿಸಲು ಕೇಂದ್ರ ಸರ್ಕಾರದ ಈ ಹೊಸ ಕ್ರಮವು ಸಹಾಯ ಮಾಡಬಹುದು ಎಂದು ಅಂದಾಜಿಸಲಾಗಿದೆ.

# ಹೃದಯಾಘಾತದಿಂದ ನಟ ದಿಲೀಪ್ ರಾಜ್ ನಿಧನ

• ಪ್ರಜೋದಯ ವರದಿ

**ಬೆಂಗಳೂರು:** ಸ್ಯಾಂಡಲ್‌ವುಡ್ ಹಾಗೂ ಕಿರುತೆರೆಯ ನಟ, ನಿರ್ಮಾಪಕ ದಿಲೀಪ್ ರಾಜ್ (47) ಹೃದಯಾ ಘಾತದಿಂದ ನಿಧನರಾಗಿದ್ದಾರೆ. ಬುಧವಾರ ಮುಂಜಾನೆ ಉತ್ತರಹಳ್ಳಿಯ ತಮ್ಮ ನಿವಾಸದಲ್ಲಿ ಅವರು ಕುಸಿದು ಬಿದ್ದಿದ್ದಾರೆ. ತಕ್ಷಣ ಅವರನ್ನು ಕುಮಾರಸ್ವಾಮಿ ಲೇಔಟ್‌ನ ಅಪೋಲೊ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಯಿತಾದರೂ, ತೀವ್ರ ಹೃದಯಾಘಾತಕ್ಕೊಳಗಾಗಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ದಿಲೀಪ್ ರಾಜ್ ಅವರ ನಿಧನಕ್ಕೆ ಚಂದನವನ ಹಾಗೂ ಕಿರುತೆರೆಯ ಕಲಾವಿದರು, ತಂತ್ರಜ್ಞರು ಸಂತಾಪ ಸೂಚಿಸಿದ್ದಾರೆ. ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಉತ್ತರಹಳ್ಳಿಯ ನಿವಾಸದಲ್ಲಿ ವ್ಯವಸ್ಥೆ ಮಾಡಲಾಗಿದ್ದು, ಇಂದು ಸಂಜೆ ಅಂತ್ಯಸಂಸ್ಕಾರ ನಡೆಯಲಿದೆ.



**ದಿಲೀಪ್ ರಾಜ್ ಹಿನ್ನೆಲೆ**

1978ರ ಸೆಪ್ಟೆಂಬರ್ 2ರಂದು ಜನಿಸಿದ್ದ ದಿಲೀಪ್ ರಾಜ್ ಅವರು ಕಾಲೇಜು ದಿನಗಳಲ್ಲೇ ನೃತ್ಯ ನಿರ್ದೇಶನದತ್ತ ಆಸಕ್ತಿ ಬೆಳೆಸಿಕೊಂಡಿದ್ದರು. ನಂತರ ನಾಟಕ ಮಂಡಳಿಗೆ ಸೇರಿ, ಕಂಬದ ಮನೆ ಧಾರಾವಾಹಿ ಮೂಲಕ ಬಣ್ಣದ ಲೋಕಕ್ಕೆ ಪ್ರವೇಶಿಸಿದರು. ಜನನಿ, ರಂಗೋಲಿ, ಅರ್ಧಸತ್ಯ, ಕುಂಕುಮ ಭಾಗ್ಯ, ಮಾಂಗಲ್ಯ, ಪ್ರೀತಿಗಾಗಿ ಸೇರಿದಂತೆ ಅನೇಕ ಧಾರಾವಾಹಿಗಳಲ್ಲಿ ನಟಿಸಿ ಜನ ಪ್ರಿಯತೆ ಗಳಿಸಿದ್ದರು.

**ನಿರ್ಮಾಪಕರಾಗಿಯೂ ಯಶಸ್ಸು**

ಕೆಲವು ವರ್ಷಗಳ ಕಾಲ ಕಿರುತೆರೆಯಿಂದ ದೂರ ಉಳಿದಿದ್ದ ದಿಲೀಪ್ ರಾಜ್, ರಥಸಪ್ತಮಿ ಧಾರಾವಾಹಿ ಮೂಲಕ ಮರುಪ್ರವೇಶ ಮಾಡಿದರು. ಬಳಿಕ ತಾವೇ ನಿರ್ಮಿಸಿ ನಟಿಸಿದ್ದ ಹಿಟ್ಲರ್ ಕಲ್ಯಾಣ ಧಾರಾವಾಹಿಯ ಎಜೆ ಪಾತ್ರ ಅವರಿಗೆ ಅಪಾರ ಜನಪ್ರಿಯತೆ ತಂದುಕೊಟ್ಟಿತ್ತು. ಸದ್ಯ ಕೃಷ್ಣರುಕ್ಕು ಧಾರಾವಾಹಿ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದರು. ಪಾರು ಹಾಗೂ ವಿದ್ಯಾ ವಿನಾಯಕ ಧಾರಾವಾಹಿಗಳಿಗೂ ಬಂಡವಾಳ ಹೂಡಿದ್ದರು.

**ಚಿತ್ರರಂಗದ ನಂಟು**

2005ರಲ್ಲಿ ಬಿಡುಗಡೆಯಾದ ಗೆಳೆಯ ಚಿತ್ರದ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟ ದಿಲೀಪ್ ರಾಜ್, ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅಭಿನಯದ ಮಿಲನ ಸಿನಿಮಾದ ಖಳನಾಯಕನ ಪಾತ್ರದ ಮೂಲಕ ಹೆಚ್ಚಿನ ಗುರುತಿಸಿಕೊಂಡರು. ಬಾಯ್ ಫ್ರೆಂಡ್ ಸಿನಿಮಾದಲ್ಲಿ ನಾಯಕನಾಗಿ ನಟಿಸಿದ್ದ ಅವರು, ಲವ್‌ಗುರು, ಗಾನಾಬಜಾನಾ, ಸುಗ್ರೀವ, ಅಂಬಿ ನಿಂಗ್ ವಯಸ್ಸಾಯ್ತೋ ಸೇರಿದಂತೆ 24ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದರು.

ಇತ್ತೀಚೆಗೆ ಲವ್ ಮಾಕ್ಟೇಲ್ 3 ಸಿನಿಮಾದಲ್ಲೂ ನಟಿಸಿದ್ದರು. ಕಂಠದಾನ ಕಲಾವಿದರಾಗಿಯೂ ಗುರುತಿಸಿಕೊಂಡಿದ್ದ ಅವರು, ಅಂತೂ ಇಂತೂ ಪ್ರೀತಿ ಬಂತು ಸಿನಿಮಾದ ನಾಯಕ ಆದಿತ್ಯ ಬಾಬು ಅವರಿಗೆ ಧ್ವನಿ ನೀಡಿದ್ದರು.

ಚಿತ್ರರಂಗದ ಗಣ್ಯರು ದಿಲೀಪ್ ಸಾವಿಗೆ ಕಂಬನಿ ಮಿಡಿದಿದ್ದಾರೆ.

# ವಸತಿ ರಹಿತರ ಆಶ್ರಯ ಘಟಕ: ಪ್ರಚಾರಕ್ಕೆ ಸೂಚನೆ

• ಪ್ರಜೋದಯ ವರದಿ

**ಹಾಸನ:** ನಗರ ವ್ಯಾಪ್ತಿಯಲ್ಲಿ ಆಶ್ರಯ ಇಲ್ಲದೆ, ರಸ್ತೆ ಬದಿ, ಬಸ್ ನಿಲ್ದಾಣಗಳಲ್ಲಿ ಮಲಗುವ ನಿರ್ಗತಿಕರು ಅರಕಲಗೂಡು ರಸ್ತೆಯ ಮಹಾನಗರ ಪಾಲಿಕೆ ಹಿಂಭಾಗದಲ್ಲಿರುವ ವಸತಿ ರಹಿತರ ಆಶ್ರಯ ಘಟಕದ (ಪುರುಷರ), ಸೌಲಭ್ಯ ಪಡೆದುಕೊಳ್ಳಲು ಹೆಚ್ಚಿನ ಪ್ರಚಾರಕ್ಕೆ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್ ಲತಾ ಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ

ಜಿಲ್ಲಾಧಿಕಾರಿ ಕಚೇರಿಯಲ್ಲಿಂದು ಡೇ-ನಲ್ಮ್ ಯೋಜನೆಯಡಿ ನಗರ ವಸತಿ ರಹಿತರ ಆಶ್ರಯ ಕೇಂದ್ರದ ಅಧಿಕಾರಯುಕ್ತ ಸಮಿತಿ ಸಭೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು ಹಾಸನ ನಗರದಲ್ಲಿ ಆಶ್ರಯ ಕೇಂದ್ರವನ್ನು ಎನ್.ಜಿ.ಓರವರು ನಿರ್ವಹಿಸುತ್ತಿದ್ದು, ನಗರದ ವಸತಿ ರಹಿತರನ್ನು ರ‍್ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ ಅವಶ್ಯಕತೆ ಇರುವ ಪುರುಷ ವಸತಿ ರಹಿತರಿಗೆ ಆಶ್ರಯ ಕಲ್ಪಿಸುವ ಕಾರ್ಯವನ್ನು ಮಾಡುವಂತೆ ನಿರ್ದೇಶನ ನೀಡಿದರು.



ಯಾವುದೇ ನಿರ್ಗತಿಕರು, ವಸತಿ ಇಲ್ಲದೆ ರಸ್ತೆ ಬದಿಯಲ್ಲಿ ಯಾರೂ ಕೂಡ ಮಲಗಬಾರದು ಈ ಬಗ್ಗೆ ಎಚ್ಚರವಹಿಸಿ ಕ್ರಮ ಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಆಶ್ರಯ ಕೇಂದ್ರದಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತೆ ಹಾಗೂ ಅಧಿಕಾರಿಗಳು ಇಲಾಖಾ ವ್ಯಾಪ್ತಿಯಲ್ಲಿ ಬರುವ ನಗರ ವಸತಿ ರಹಿತರನ್ನು ಆಶ್ರಯ ಕೇಂದ್ರದಲ್ಲಿ ಆಶ್ರಯ ಪಡೆಯಲು ಕ್ರಮವಹಿಸಲು ತಿಳಿಸಿದರು.

ಸಭೆಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಬಾಲ್ಯ ವಿವಾಹ ತಡೆ, ಬಾಲ ಕಾರ್ಮಿಕರ ಪತ್ತೆಗೆ ಕ್ರಮ ವಹಿಸಿ

## ಅಧಿಕಾರಿಗಳಿಗೆ ಸತ್ರ ನ್ಯಾಯಾಧೀಶರಾದ ಹೇಮಾವತಿ ನಿರ್ದೇಶನ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಬಾಲ್ಯ ವಿವಾಹ, ಫೋಕ್ಸೋ ಪ್ರಕರಣಗಳ ತಡೆಗೆ ಮತ್ತು ಬಾಲ ಕಾರ್ಮಿಕರ ಪತ್ತೆಗಾಗಿ ಕ್ರಮ ಕೈಗೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಸಭೆ ನಡೆಸಿ ಮಾತನಾಡಿದ ಅವರು, ಬಾಲ್ಯ ವಿವಾಹ ತಡೆಗೆ ಸಹಾಯವಾಣಿ ಸಂಖ್ಯೆ ಕುರಿತು ವ್ಯಾಪಕ ಪ್ರಚಾರ ಆಗಬೇಕು ಎಂದು ತಿಳಿಸಿದರು. ಬಾಲ್ಯ ವಿವಾಹ ತಡೆದ ನಂತರ ಮುಂದೆ ಅದನ್ನು ಫಾಲೋ ಅಪ್ ಮಾಡಬೇಕು. ಜಿಲ್ಲೆಯಲ್ಲಿ ಯಾವುದೇ ಮಗುವು ಶಿಕ್ಷಣದಿಂದ ವಂಚಿತರಾಗದಂತೆ ನಿಗಾವಹಿಸಬೇಕು. ಈ ನಿಟ್ಟಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಶಾಲೆಗೆ ಮರುಸೇರ್ಪಡೆಗೆ ಕ್ರಮಕೈಗೊಳ್ಳುವಂತೆ ಅವರು ತಿಳಿಸಿದರು.



ಶಾಲೆಗಳಲ್ಲಿ ಪೋಷಕರ ಸಭೆ ನಡೆಸುವ ಸಂದರ್ಭದಲ್ಲಿ ಫೋಕ್ಸೋ, ಬಾಲ್ಯವಿವಾಹ, ಬಾಲ ಕಾರ್ಮಿಕ ಪದ್ಧತಿ ಕುರಿತು ತಿಳುವಳಿಕೆ ಮೂಡಿಸುವ ಮೂಲಕ ಮನಃಪರಿವರ್ತನೆಗೆ ಕ್ರಮ ಕೈಗೊಳ್ಳಿ, ಶಿಕ್ಷಕರಿಗೆ ತರಬೇತಿ ಆಯೋಜಿಸಿದ ಸಂದರ್ಭದಲ್ಲಿ ನ್ಯಾಯಾಧೀಶರು, ಪೊಲೀಸ್ ಅಧಿಕಾರಿಗಳಿಂದ ಕಾಯ್ದೆ ಕುರಿತು ಉಪನ್ಯಾಸ ನೀಡಲು ಆಹ್ವಾನಿಸುವಂತೆ ಸೂಚಿಸಿದರು.

ಮಕ್ಕಳನ್ನು ಯಾವುದೇ ಕಾರ್ಯಕ್ರಮದ ಮೆರವಣಿಗೆಗೆ ಬಳಸಿಕೊಳ್ಳುವಂತಿಲ್ಲ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಎಚ್ಚರ ವಹಿಸುವಂತೆ ಹೇಳಿದರಲ್ಲದೆ, ಫೋಕ್ಸೋ ಪ್ರಕರಣದಲ್ಲಿ ಸಾಕ್ಷಿ ಹಾಳಾಗದಂತೆ ವಿಳಂಬ ಮಾಡದೆ ಘಟನೆಯಾದ ತಕ್ಷಣ ತಪಾಸಣೆ ನಡೆಸಿ ಮೆಡಿಕಲ್ ರಿಪೋರ್ಟ್ ಪಡೆದುಕೊಳ್ಳಲು ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸುವಂತೆ ತಿಳಿಸಿದರು.

ಬಸ್ ನಿಲ್ದಾಣ, ರಸ್ತೆ ಪಕ್ಕದಲ್ಲಿ, ಅಂಗಡಿಗಳ ಮುಂದೆ ನಿರಾಶ್ರಿತರು ರಾತ್ರಿ ವೇಳೆಯಲ್ಲಿ ಮಲಗುತ್ತಾರೆ ಅವರ ರಕ್ಷಣೆ ಹಿತದೃಷ್ಟಿಯಿಂದ ತಂಗಲು ವ್ಯವಸ್ಥೆಗೆ ಕ್ರಮವಹಿಸಲು ಅಧಿಕಾರಿಗಳಿಗೆ ನ್ಯಾ॥ ಹೇಮಾವತಿ ಅವರು ಸೂಚನೆ ನೀಡಿದರು.

ಸಾರ್ವಜನಿಕರ ಯಾವುದೇ ಸಮಸ್ಯೆಯಾಗಲಿ ಅದು ತಮ್ಮ ಮನೆಯ ಸಮಸ್ಯೆ ಎಂದು ಭಾವಿಸಿ ಪರಿಹಾರ ಒದಗಿಸಲು ಸ್ಪಂದಿಸಿ ಜವಾಬ್ದಾರಿಯಿಂದ ನೊಂದವರಿಗೆ ಪರಿಹಾರ ಕಲ್ಪಿಸಲು ನಿಗಾ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರಲ್ಲದೆ, ಕೆರೆಗಳಲ್ಲಿ ಹೂಳು ತುಂಬಿರುವುದನ್ನು ತೆಗೆಯುವುದರಿಂದ ಮಳೆಗಾಲದಲ್ಲಿ ನೀರು ಶೇಖರಣೆಯಾಗಿ ಕೃಷಿ ಚಟುವಟಿಕೆಗಳಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿಗೆ ಸಹಾಯವಾಗುತ್ತದೆ ಎಂದು ಸಲಹೆ ನೀಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಪುಟ್ಟಸ್ವಾಮಿ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಶ್ರೀನಿಧಿ ಹಾಗೂ ಮತ್ತಿತರು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

### ಪಂಚ ಭಾಷಾ ಚುಟುಕು ಕವಿಗೋಷ್ಠಿಗೆ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ನಡೆಯುವ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಪಂಚಭಾಷಾ ಚುಟುಕು ಕವಿಗೋಷ್ಠಿ ಏರ್ಪಡಿಸಲಾಗಿದೆ.

ಈ ಕವಿಗೋಷ್ಠಿಯಲ್ಲಿ ಭಾಗವಹಿಸಲು ಇಚ್ಛಿಸುವ ಚುಟುಕು ಕವಿಗಳು ತಮ್ಮ ಪಾಸ್ಪೋರ್ಟ್ ಸೈಜ್ ಫೋಟೋ ಹಾಗೂ ಪರಿಚಯಪತ್ರದೊಂದಿಗೆ ನೀವು ಭಾಗವಹಿಸುವ ಭಾಷೆಯಲ್ಲಿ ಮೂರು ಚುಟುಕುಗಳನ್ನು 98445 66748 ಈ ವಾಟ್ಸಾಪ್ ಸಂಖ್ಯೆಗೆ ಕಳುಹಿಸಿ. ಭಾಗವಹಿಸುವ ಚುಟುಕು ಕವಿಗಳಿಗೆ ಪಂಚಭಾಷ ಚುಟುಕು ಕೌಸ್ತುಭ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಹಾಸನ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಾ.ನಂ. ಲೋಕೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾರತದಲ್ಲಿ ಹುಟ್ಟಿರುವ ನಾವೆಲ್ಲರೂ ಪುಣ್ಯವಂತರು

## ದೇಶದ ಸುರಕ್ಷತೆಗೆ ಪ್ರಧಾನಿ ಮೋದಿ ಕಾರಣ: ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಆಲೂರು:** ಭಾರತ ದೇಶ ಯಾವುದೇ ಸಂದರ್ಭದಲ್ಲೂ ಯಾವ ದೇಶದ ಮೇಲೆ ದಂಡೆತ್ತಿ ಹೋಗಲಿಲ್ಲ. ಈಗ ಬಂದರೆ ಬಿಡುವುದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿನ ಪರಿಸ್ಥಿತಿಯನ್ನು ಒಮ್ಮೆ ಅವಲೋಕಿಸಲು ನಡುಕವಾಗುತ್ತದೆ. ಆದರೆ ನಮ್ಮ ದೇಶದ ಪ್ರಧಾನ ಮಂತ್ರಿಗಳು, ದೇಶದಲ್ಲಿ ಯಾರಿಗೂ ತೊಂದರೆಯಾಗದಂತೆ ದಿನನಿತ್ಯ ಜೀವನದಲ್ಲಿ ಸುರಕ್ಷತೆಯನ್ನು ಕಾಪಾಡಿದ್ದಾರೆ. ನಮ್ಮ ದೇಶದ ವಾಯು ನೆಲೆಯಲ್ಲಿ ಯಾವುದೇ ರಾಕೆಟ್‌ಗಳು ಹಾರಿಸಲು ಭಯಭೀತರಾಗಿದ್ದಾರೆ. ಭಾರತ ದೇಶದಲ್ಲಿ ಹುಟ್ಟಿರುವ ನಾವೆಲ್ಲ ಪುಣ್ಯವಂತರು ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.



ಪಟ್ಟಣದ ಸರ್ಕಾರಿ ಕಾಲೇಜು ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದ ರವರು ಚಿಕಾಗೋದಲ್ಲಿ ಧರ್ಮ ಸಮ್ಮೇಳನ ಉದ್ದೇಶಿಸಿ ಮಾಡಿದ ಭಾಷಣ, ಪ್ರಪಂಚವನ್ನು ಸೂಜಿಗಲ್ಲಿನಂತೆ ಸೆಳೆಯಿತು. ಅಲ್ಲಿ ಸೇರಿದ್ದ ಸಭಿಕರು 2 ನಿಮಿಷ ಅವಿರತವಾಗಿ ಚಪ್ಪಾಳೆ ತಟ್ಟಿದರು ಎಂದು ಸ್ಮರಿಸಿದರಲ್ಲದೆ, ವಿದ್ಯೆ ಎಂಬುದು ಹುಲಿ ಹಾಲಿದ್ದಂತೆ, ಅದನ್ನು ಕುಡಿದವರು ಘರ್ಜಿಸಲೇಬೇಕು ಎಂಬ ಡಾ.ಅಂಬೇಡ್ಕರ್ ರವರ ಸಂದೇಶವನ್ನು ವಿದ್ಯಾರ್ಥಿಗಳು ಪಾಲಿಸಬೇಕು ಎಂದು ಕರೆ ನೀಡಿದರು.

ಹಾಸನ ಎವಿಕೆ ಕಾಲೇಜು ಪ್ರಾಂಶುಪಾಲ ಡಾ.ಸಿ.ಚ.ಯತೀಶ್ವರ್ ಅವರು ದಿಕ್ಸೂಚಿ ಭಾಷಣ ಮಾಡುತ್ತಾ, ಶಿಕ್ಷಣ, ಜ್ಞಾನ ಎಂಬುದು ವ್ಯಕ್ತಿ, ಸಮಾಜ ಮತ್ತು ದೇಶದ ಅಡಿಪಾಯ. ಶಿಕ್ಷಣಕ್ಕೆ ಮಹತ್ವ ನೀಡದ ಸಮಾಜ ಪ್ರಗತಿಯತ್ತ ಸಾಗುವುದಿಲ್ಲ. ಜ್ಞಾನವೆಂಬುದು ಪರಿಣಾಮಕಾರಿ ಆಯುಧ ಎಂದು ಡಾ. ನೆಲ್ಸನ್ ಮಂಡೇಲ ಹೇಳಿದ್ದಾರೆ. ಗುರುಕುಲ ಶಿಕ್ಷಣ ಪದ್ಧತಿಯಿಂದ ಆಧುನಿಕ ಶಿಕ್ಷಣ ಪದ್ಧತಿವರೆಗೆ ನಡೆದು ಬಂದಿದ್ದೇವೆ. ಭರತ ಖಂಡದ ಮೇಲೆ ದಾಳಿ ಮಾಡಿದವರು ಸಂಪತ್ತು ಹೊತ್ತೊಯ್ದರೆ ಹೊರತು, ಆಧ್ಯಾತ್ಮಿಕ ಸಂಪತನ್ನು ಹೊತ್ತೊಯ್ಯಲು ಸಾಧ್ಯವಾಗಲಿಲ್ಲ, ಇದಕ್ಕೆ ವೇದ, ಉಪನಿಷತ್ತು, ಭಗವದ್ಗೀತೆ, ರಾಮಾಯಣ, ಮಹಾಭಾರತ, ಭಾಗವತ ಕಾರಣವಾಗಿದೆ. ಅಖಂಡ ಭಾರತ ನಿಂತಿರುವುದು ಜ್ಞಾನದ ಭಂಡಾರದ ಮೇಲೆ. ಜ್ಞಾನ ಭಂಡಾರ ಬೆಳೆದಂತೆ ವ್ಯಕ್ತಿತ್ವ ವಿಕಸನ ವೃದ್ಧಿಯಾಗುತ್ತದೆ ಎಂದರು.

ವಿದ್ಯಾರ್ಥಿಗಳು ಮೊಬೈಲ್ ಬಳಕೆ ಬಿಟ್ಟು, ದಿನಪತ್ರಿಕೆ ಓದುವ ಮೂಲಕ ತಮ್ಮ ಜ್ಞಾನ ವೃದ್ಧಿಸಿಕೊಳ್ಳಲೆಂದು ಪತ್ರಕರ್ತ ನವೀನ್ ತಿಳಿಸಿದರು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ, ದತ್ತಿದಾನಿ ಕೆ.ಎಸ್. ಮಂಜೇಗೌಡ, ಪ್ರಾಂಶುಪಾಲ ಟಿ. ಪಿ. ಪುಟ್ಟರಾಜು, ದತ್ತಿದಾನಿ ಶಾಂತಕೃಷ್ಣ, ಲಯನ್ಸ್ ಸಂಸ್ಥೆ ಅಧ್ಯಕ್ಷ ಬಿ. ಮಂಜೇಗೌಡ, ಬಿಜೆಪಿ ಮುಖಂಡ ಅಬ್ಬನ ಕೃಷ್ಣಮೂರ್ತಿ, ಕೆ.ಎಚ್. ರಮೇಶ್, ಪ್ರೊ.ನಟರಾಜ್, ಅತಿಥಿ ಉಪನ್ಯಾಸಕಿ ಸರಿತಾ, ಪ್ರೊ. ರಾಘವೇಂದ್ರ ಇದ್ದರು.

### ಕೆರೆಯ ಮಧ್ಯದಲ್ಲಿ ಮಣ್ಣು: ಪರಿಶೀಲನೆ

• ಪ್ರಜೋದಯ ವರದಿ

**ಹಳೇಬೀಡು:** ಬಿದುರು ಕೆರೆಯ ಮಧ್ಯದಲ್ಲಿ ಮಣ್ಣು ಸುರಿದಿರುವುದಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಸಾರ್ವಜನಿಕರಿಂದ ಆಕ್ಷೇಪಣೆ ವ್ಯಕ್ತವಾಗಿದ್ದರಿಂದ ಪಿಡಿಒ ಎಸ್.ಸಿ. ವಿರೂಪಾಕ್ಷ ಹಾಗೂ ರಾಜಸ್ವ ನಿರೀಕ್ಷಕ ವಿಠಲ ರಾಜ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೆರೆ ಮುಂದಿನ ಜಮೀನುಗಳಿಗೆ ರಸ್ತೆ ಮಾಡಿಕೊಳ್ಳಲು ಮಣ್ಣು ಸುರಿದಿರಬಹುದು. ಕೆರೆ ಭರ್ತಿಯಾಗುವವರೆಗೆ ತಾತ್ಕಲೀಕ ರಸ್ತೆ ನಿರ್ಮಾಣಕ್ಕೆ ಕೈ ಹಾಕಿದ್ದಾರೆ. ಕೆರೆಯಲ್ಲಿ ಮಣ್ಣು ತುಂಬಿಸಿದರೆ ನೀರು ಸಂಗ್ರಹಣೆ ಸಾಮರ್ಥ್ಯ ಕಡಿಮೆಯಾಗುತ್ತದೆ. ಗ್ರಾಮ ಪಂಚಾಯಿತಿಯವರು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯವರು ಒತ್ತಾಯಿಸಿದರು.



ಸ್ಥಳಕ್ಕೆ ಭೇಟಿ ನೀಡಿದ ಪಿಡಿಒ ಎಸ್.ಸಿ. ವಿರೂಪಾಕ್ಷ ಮಾತನಾಡಿ, ಕೆರೆ, ಕಟ್ಟೆಗಳ ಸಂರಕ್ಷಣೆ ಎಲ್ಲರ ಹೊಣೆ. ಕೆರೆ ಒಡಲಿಗೆ ಅನುಪಯುಕ್ತ ತ್ಯಾಜ್ಯ ಹಾಗೂ ಮಣ್ಣು ಸುರಿಯುವುದು ತಪ್ಪಾಗುತ್ತದೆ. ಕೆರೆಗೆ ಮಣ್ಣು ಸುರಿಯುವುದಕ್ಕೆ ತಕ್ಷಣ ಕಡಿವಾಣ ಹಾಕುತ್ತೇವೆ ಎಂದರು.

ಬಿದುರು ಕೆರೆ ಕಂದಾಯ ಇಲಾಖೆ ವ್ಯಾಪ್ತಿಗೆ ಒಳ ಪಡುವುದಿಲ್ಲ. ಗ್ರಾಮ ಪಂಚಾಯಿತಿಗೆ ವಹಿಸಲಾಗಿದೆ. ಸಾರ್ವಜನಿಕ ಹಿತ ದೃಷ್ಟಿಯಿಂದ ಪರಿಶೀಲನೆ ನಡೆಸಿದ್ದೇವೆ ಎಂದು ರಾಜಸ್ವ ನಿರೀಕ್ಷಕ ವಿಠಲ ರಾಜ್ ಹೇಳಿದರು.

# ಆಕಸ್ಮಿಕ ಬೆಂಕಿ: 50 ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತುಗಳು ಭಸ್ಮ

• ಪ್ರಜೋದಯ ವರದಿ

**ಆಲೂರು:** ಪಾಳ್ಯ ಹೋಬಳಿ ಕಣದಹಳ್ಳಿ ಗ್ರಾಮದಲ್ಲಿ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಕೆ. ಎಸ್. ಮಂಜೇಗೌಡರಿಗೆ ಸೇರಿದ ಮೂರು ಮನೆಗಳಿಗೆ ಬುಧವಾರ ಆಕಸ್ಮಿಕ ಬೆಂಕಿ ತಗುಲಿ ಸುಮಾರು 50 ಲಕ್ಷ ಬೆಲೆ ಬಾಳುವ ವಸ್ತುಗಳು ನಾಶವಾಗಿವೆ.

ಕೆ.ಎಸ್.ಮಂಜೇಗೌಡರ ಸೋದರ ಸಂಬಂಧಿಗಳಾದ ಹೇಮಾವತಿ ರಾಜೇಗೌಡ, ಶಾಂತಮ್ಮ ಮತ್ತು ಇವರ ದೊಡ್ಡಪ್ಪ ಮನೆಗಳು ಒಂದಕ್ಕೊಂದು ತಾಕಿಗೊಂಡು ಇದ್ದವು. ಮಧ್ಯಾಹ್ನ ವೇಳೆಯಲ್ಲಿ ಬೆಂಕಿ ತಗುಲಿರುವುದು ಗೊತ್ತಾದ ತಕ್ಷಣ ಅಗ್ನಿಶಾಮಕ ದಳದವರು ಬಂದು ಬೆಂಕಿ ಆರಿಸಿದರು. ಅಷ್ಟರಲ್ಲಿ ಮನೆಯಲ್ಲಿದ್ದ ಬಟ್ಟೆ, ಚಿನ್ನ, ಭತ್ತ, ದಿನಬಳಕೆ ವಸ್ತುಗಳು ಸಂಪೂರ್ಣ ಸುಟ್ಟು ಕರಕಲಾಗಿದ್ದವು. ಸ್ಥಳಕ್ಕೆ ಶಾಸಕ ಸಿಮೆಂಟ್ ಮಂಜು ಭೇಟಿ ನೀಡಿ ಸಾಂತ್ವನ ಹೇಳಿದರು.

ಮೂರು ಮನೆಯಲ್ಲಿದ್ದ ಕೆಲವರು ಮದುವೆ ಕಾರ್ಯಕ್ಕೆ, ಕೆಲವರು ಕೃಷಿ ಕೆಲಸಕ್ಕೆ ಹೋಗಿದ್ದರು. ಈ ಸಂದರ್ಭದಲ್ಲಿ ಬೆಂಕಿ ತಗುಲಿದೆ ಎನ್ನಲಾಗಿದ್ದು ಕಾರಣ ತಿಳಿದು ಬಂದಿಲ್ಲ. ಹೇಮಾವತಿ ರಾಜೇಗೌಡರ ಮನೆಯಲ್ಲಿ 1.70 ಲಕ್ಷ ರೂ. ನಗದು, 100 ಗ್ರಾಂ ಚಿನ್ನ, 20 ಕ್ವಿಂಟಾಲ್ ಭತ್ತ, ಶಾಂತಮ್ಮ ಅವರ ಮನೆಯಲ್ಲಿ 20 ಚೀಲ ಭತ್ತ, 70 ಸಾವಿರ ರೂ. ನಗದು, ಚಿನ್ನ ಮತ್ತು ಸಣ್ಣಪ್ಪಗೌಡರ ಮನೆಯಲ್ಲಿಯೂ ಭತ್ತ, ಚಿನ್ನ, ನಗದು ಸುಟ್ಟು ಕರಕಲಾಗಿದೆ.



ಹಿಂದಿನ ಕಾಲದ ಬಿದಿರುಗಳ, ಹೆಂಚಿನ ಮನೆಗಳಾಗಿದ್ದರಿಂದ ಬೆಂಕಿ ತನ್ನ ಕೆನ್ನಾಲಿಗೆಯನ್ನು ಚಾಚಿ ಮೂರು ಮನೆಗಳು ಭಸ್ಮವಾಗಿವೆ. ಸ್ಥಳಕ್ಕೆ ಕಂದಾಯ, ಪೊಲೀಸ್ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ್ದರು.

ನಮ್ಮ ತಂದೆ ಕಾಲದ ಮನೆಯನ್ನು ನಾವು ಸಹೋದರರು ವಿಭಾಗ ಮಾಡಿಕೊಂಡಿದ್ದೆವು. ಮಾಜಿ ಪ್ರಧಾನಿ ಎಚ್.ಡಿ.ದೇವೆಗೌಡರು ನಾಲ್ಕು ಬಾರಿ ಈ ಮನೆಗೆ ಭೇಟಿ ನೀಡಿದ್ದರು. ಎರಡು ಮನೆಯಲ್ಲಿ ನಮ್ಮ ಸಹೋದರರಿದ್ದು, ಒಂದು ಮನೆಯಲ್ಲಿ ಮಾತ್ರ ಮುಳುಗಡೆ ಪ್ರದೇಶದಿಂದ ಬಂದವರು ಕೊಂಡು ವಾಸಿಸುತ್ತಿದ್ದರು. ಸರ್ಕಾರ ಕೂಡಲೆ ಪರಿಹಾರ ನೀಡಬೇಕು ಎಂದು ಮಂಜೇಗೌಡ ಆಗ್ರಹಿಸಿದ್ದಾರೆ.

# ಹಾಳು ಕೊಂಪೆಯಾಗಿರುವ ಸೆಸ್ಕ್ ವಸತಿ ಗೃಹಗಳು

• ಪ್ರಜೋದಯ ವರದಿ

**ಹಳೇಬೀಡು:** ಹೊಯ್ಸಳೇಶ್ವರ ದೇವಾಲಯ ರಸ್ತೆಯಲ್ಲಿರುವ ಸೆಸ್ಕ್ ಶಾಖಾ ಕಚೇರಿ ಆವರಣದ ವಸತಿ ಗೃಹ ಹಾಗೂ ಸುತ್ತಮುತ್ತಲಿನ ಪ್ರದೇಶದ ಕಸ -ಕಡ್ಡಿ ಮದ್ಯದ ಬಾಟಲಿಗಳಿಂದ ತುಂಬಿದ್ದು ಗಲೀಜು ವಾತಾವರಣ ನಿರ್ಮಾಣವಾಗಿದ್ದು, ವಸತಿ ಗೃಹಗಳು ಹಾಳು ಕೊಂಪೆಯಂತಾಗಿವೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೆಸ್ಕ್ ಕಚೇರಿ ಆವರಣದಲ್ಲಿ ಒಂದು ಕಿರಿಯ ಎಂಜಿನಿಯರ್ ವಸತಿ ಗೃಹ 4 ಪವರ್ ಮ್ಯಾನ್ ವಸತಿ ಗೃಹಗಳಿವೆ. ಕಿರಿಯ ಎಂಜಿನಿಯರ್ (ಶಾಖಾಧಿಕಾರಿ) ವಸತಿ ಗೃಹ ಸ್ವಲ್ಪ ಗಟ್ಟಿಮುಟ್ಟಾಗಿದೆ. ಶಾಖಾಧಿಕಾರಿ ಕಚೇರಿ ಉಪ ವಿಭಾಗವಾಗಿ ಪರಿವರ್ತನೆ ಆಗುತ್ತಿರುವುದರಿಂದ ಹೆಚ್ಚುವರಿ ಕಟ್ಟಡ ಅಗತ್ಯ ಇರುವುದರಿಂದ ಕಿರಿಯ ಎಂಜಿನಿಯರ್ ವಸತಿಗೃಹಕ್ಕೆ ಕಚೇರಿ ವಿಸ್ತರಿಸಲಾಗಿದೆ. ಆದರೆ ಕಟ್ಟಡದ ಹಿಂಭಾಗದ ತೊಟ್ಟಿಯಲ್ಲಿ ಮದ್ಯದ ಖಾಲಿ ಬಾಟಲಿಗಳು ತುಂಬಿವೆ.



### ಶೀಘ್ರವೇ ಕ್ರಮ ಕೈಗೊಳ್ಳುತ್ತೇವೆ

ಹಳೇಬೀಡಿನ ಪವರ್ ಮ್ಯಾನ್ ವಸತಿ ಗೃಹಗಳ ಕಟ್ಟಡಗಳು ದುರಸ್ತಿಗೆ ಬಾರಾದಂತೆ ಶಿಥಿಲವಾಗಿವೆ. ಕಟ್ಟಡ ತೆರವು ಮಾಡಿ ಹೊಸ ಕಟ್ಟಡ ನಿರ್ಮಾಣ ಮಾಡುವ ಕುರಿತು ಪ್ರಕ್ರಿಯೆ ನಡೆಯುತ್ತಿದೆ. ವಸತಿ ಗೃಹ ಹಾಗೂ ಸುತ್ತಮುತ್ತ ಸ್ವಚ್ಛತೆ ಇಲ್ಲದಿರುವುದನ್ನು ಶೀಘ್ರದಲ್ಲಿಯೇ ಪರಿಶೀಲನೆ ನಡೆಸುತ್ತೇವೆ. ಹೊರಗಿನವರು ಇಲ್ಲವೆ ಸಿಬ್ಬಂದಿ, ಯಾರು ಪಾರ್ಟಿ ನಡೆಸಿದ್ದರೂ ಕ್ರಮ ಕೈಗೊಳ್ಳುತ್ತೇವೆ.

– ಬಸವರಾಜು, ಸಹಾಯಕ ಕಾರ್ಯಪಾಲಕ ಎಂಜಿನಿಯರ್.

ಈಗ ಎಲ್ಲಾ ಕೆಲಸಗಳಿಗೂ ವಿದ್ಯುತ್ ಅತ್ಯಗತ್ಯವಾಗಿದೆ. ವಿದ್ಯುತ್ ನಿರ್ವಹಣೆ ಸಮರ್ಪಕವಾಗಿ ನಡೆದರೆ ಮಾತ್ರ ಬೆಳಕು, ಕುಡಿಯಲು ನೀರು ದೊರಕುತ್ತದೆ. ವಿದ್ಯುತ್ ಸೇವೆ ಶ್ರೇಷ್ಠ ಕೆಲಸವಾಗಿದೆ. ಕಚೇರಿ ಹಾಗೂ ವಸತಿ ಗೃಹದಲ್ಲಿ ಮದ್ಯದ ಬಾಟಲಿ ಬೀಳದಂತೆ ಸಿಬ್ಬಂದಿ ಎಚ್ಚರ ವಹಿಸಬೇಕು. ಪವರ್ ಮ್ಯಾನ್ ವಸತಿ ಗೃಹಗಳಲ್ಲಿ ಹಳೆಯ ಸಾಮಾನುಗಳಿಂದ ಗಲೀಜು ತುಂಬಿಕೊಂಡಿದ್ದು, ಉಪಯೋಗಕ್ಕೆ ಬಾರದಂತಾಗಿವೆ.

# ರಾಜ್ಯದ ಬಹುತೇಕ ಕಡೆ ಇಂದು ಮಳೆ

• ಪ್ರಜೋದಯ ವರದಿ

**ಬೆಂಗಳೂರು:** ಉತ್ತರ ಒಳನಾಡಿನ ಜಿಲ್ಲೆಗಳಲ್ಲಿನ ತಾಪಮಾನ ಏರಿಕೆ ಎಚ್ಚರಿಕೆಯ ನಡುವೆಯೂ ಮುಕ್ಕಾಲು ಕರ್ನಾಟಕದಲ್ಲಿ ನಾಳೆ ಮಳೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಮಂಡ್ಯ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಕೆಲ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದೆಲ್ಲಡೆ ವರುಣನ ಆಗಮನದ ನಿರೀಕ್ಷೆ ಇದೆ. ಹಲವೆಡೆ ಗುಡುಗು, ಮಿಂಚಿನ ಜೊತೆ ಭಾರಿ ಗಾಳಿ ಒಳಗೊಂಡ ಮಳೆ ಸುರಿಯಲಿದೆ ಎಂದು ಎಚ್ಚರಿಸಲಾಗಿದೆ.

ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಸಾಧಾರಣ ಅಥವಾ ಮಧ್ಯಮ ಪ್ರಮಾಣದ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡು ಭಾಗದ ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಯಚೂರಿನಲ್ಲೂ ವರುಣನ ಆಗಮನದ ನಿರೀಕ್ಷೆ ಇದೆ.

ಹಾಗೆಯೇ ದಕ್ಷಿಣ ಒಳನಾಡು ಜಿಲ್ಲೆಗಳಾದ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ,



ಕೊಡಗು, ಕೋಲಾರ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳಲ್ಲಿಯೂ ಮಳೆಯ ಸಾಧ್ಯತೆ ಇದೆ.

ಉಳಿದಂತೆ ಬಾಗಲಕೋಟೆ, ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ಮಂಡ್ಯ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಜೊತೆಗೆ ಮುಂದಿನ ಐದು ದಿನಗಳ ಕಾಲ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿನ ತಾಪಮಾನ 2-3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದೆ.

**ಬೆಂಗಳೂರಲ್ಲೂ ಮಳೆ ಸಾಧ್ಯತೆ**

ಬೆಂಗಳೂರು ನಗರದಲ್ಲಿಯೂ ನಾಳೆ ಮಳೆ ಸಾಧ್ಯತೆ ಇರೋದಾಗಿ ಹವಾಮಾನ ಇಲಾಖೆ ಎಚ್ಚರಿಸಿದೆ.

## ಕುಟುಂಬ ಮತ್ತು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ | ಜಿಲ್ಲಾ ಹಿರಿಯ ಸಿವಿಲ್ ನ್ಯಾಯಧೀಶೆ ಜಿ.ಕೆ.ದಾಕ್ಷಾಯಿಣಿ

# ತಾಯಂದಿರ ನಿಸ್ವಾರ್ಥ ಸೇವೆ ಪ್ರತಿಯೊಬ್ಬರೂ ಗೌರವಿಸಬೇಕು

• ಪ್ರಜೋದಯ ವರದಿ

**ಹಾಸನ:** ವಿಶ್ವ ತಾಯಂದಿರ ದಿನದಂದು ತಾಯಂದಿರನ್ನು ಅವರ ಪ್ರೀತಿ, ತ್ಯಾಗ ಮತ್ತು ಅವರ ಕುಟುಂಬ ಮತ್ತು ಸಮಾಜಕ್ಕೆ ನೀಡಿದ ಕೊಡುಗೆಗಳಿಗಾಗಿ ಗೌರವಿಸುವ ಮಹತ್ತರ ಕಾರ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಜಿ.ಕೆ. ತಿಳಿಸಿದರು.

ಭಾರತ್ ಸ್ಕೌಟ್ಸ್ ಗೈಡ್ಸ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ವಿಶ್ವ ತಾಯಂದಿರ ದಿನಾರಣೆಯಲ್ಲಿ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿ ಜಗತ್ತಿನಲ್ಲಿ ಅಮ್ಮ ಎನ್ನುವ ಪದಕ್ಕೆ ಇರುವ ಶಕ್ತಿ ಅಪ್ರತಿಮವಾದದ್ದು. ನೂರು ಜನ್ಮ ಕಳೆದರು ತಾಯಿಯ ಋಣ ತೀರಿಸಲಾಗದು ಎಂಬ ಮಾತಿದೆ. ನಿಸ್ವಾರ್ಥವಾಗಿ ಮಕ್ಕಳಿಗೆ ಎಲ್ಲವನ್ನೂ ನೀಡುವ ತಾಯಂದಿರನ್ನು ಗೌರವಿಸುವ ಸಲುವಾಗಿ ಮೇ ಎರಡನೇ ಭಾನುವಾರವನ್ನು ವಿಶ್ವ ಅಮ್ಮಂದಿರ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ. ಈ ದಿನವನ್ನು ತಾಯಿಯ ನಿಸ್ವಾರ್ಥ ಪ್ರೀತಿ, ತ್ಯಾಗ ಮತ್ತು ಕುಟುಂಬಕ್ಕಾಗಿ ಅವರು ಮಾಡುವ ಸೇವೆಯನ್ನು ಗೌರವಿಸುವ ಸಲುವಾಗಿ ಆಚರಿಸಲಾಗುತ್ತದೆ. ಇದು ಅಮ್ಮನಿಗೆ ವಿಶೇಷ ಅನುಭೂತಿ ನೀಡುವ ಮತ್ತು ಪ್ರೀತಿ ತೋರುವ ದಿನವಾಗಿದೆ ಎಂದರು.



ಮಲ್ನಾಡ್ ಆಸ್ಪತ್ರೆಯ ಖ್ಯಾತ ಸ್ತ್ರೀರೋಗ ತಜ್ಞೆ ಡಾ.ಎ.ಸಾವಿತ್ರಿ ಮಾತನಾಡಿ, ಇತ್ತೀಚೆಗೆ ತಾಯಂದಿರಿಗೆ ಬಹುವಾಗಿ ಕಾಡುವ ಕಾಯಿಲೆಗಳೆಂದರೆ ಗರ್ಭಕೋಶದ ಕ್ಯಾನ್ಸರ್ ಹಾಗೂ ಸ್ತನ ಕ್ಯಾನ್ಸರ್. ಎಷ್ಟೋ ತಾಯಂದಿರು ಮಕ್ಕಳಿಗಾಗಿ, ಮನೆಯಲ್ಲಿನ ಕಾರ್ಯಗಳಿಗಾಗಿ, ಕೌಟುಂಬಿಕ ಕಾರಣಕ್ಕಾಗಿ ಹಲವು ನೋವು ಅನುಭವಿಸಿದರೂ ಹೇಳಿಕೊಳ್ಳಲಾಗದೇ ಮುಚ್ಚಿಟ್ಟುಕೊಂಡು ಮೂರನೇ ಹಂತಕ್ಕೆ ಅಂತಿಮ ಹಂತಕ್ಕೆ ಬಂದಾಗ ಆಸ್ಪತ್ರೆಗೆ ಬರುತ್ತಾರೆ. ಅಷ್ಟೊತ್ತಿಗಾಗಲೇ ಪರಿಸ್ಥಿತಿ ಕೈಮೀರಿ ಹೋಗಿರುತ್ತದೆ. ಅಮ್ಮಂದಿರ ದಿನಾಚರಣೆ ಕೇವಲ ಅಮ್ಮಂದಿರಿಗಲ್ಲ, ಎಲ್ಲಾ ಪುರುಷರು ತಮ್ಮ ತಾಯಿ, ಅಕ್ಕ, ತಂಗಿ, ಹೆಂಡತಿ, ಮಕ್ಕಳ ಆರೋಗ್ಯದ ಬಗ್ಗೆಯೂ ಗಮನಹರಿಸಿ ಆಗಿದ್ದಾಗ್ಗೆ ಆಸ್ಪತ್ರೆಗೆ ತೋರಿಸುವ ಕಾಳಜಿ ವಹಿಸಬೇಕು ಎಂದು ಹೇಳಿದರು.

ಗರ್ಭಕೋಶದ ಕ್ಯಾನ್ಸರ್ ಎನ್ನುವುದು ಗರ್ಭಾಶಯದ ಕೋಶಗಳಲ್ಲಿ, ಸಾಮಾನ್ಯವಾಗಿ ಅದರ ಒಳಪದರದಲ್ಲಿ ಉಂಟಾಗುವ ಅಸಹಜ ಬೆಳವಣಿಗೆಯಾಗಿದೆ. ಇದು ಮಹಿಳೆಯರಲ್ಲಿ ಕಂಡುಬರುವ ಪ್ರಮುಖ ಸಂತಾನೋತ್ಪತ್ತಿ ಕ್ಯಾನ್ಸರ್ ಆಗಿದ್ದು, ಮುಖ್ಯವಾಗಿ ಋತುಬಂಧದ ನಂತರದ ಮಹಿಳೆಯರಲ್ಲಿ ಕಂಡುಬರುತ್ತದೆ. ಆರಂಭಿಕ ಹಂತದಲ್ಲಿ ಪತ್ತೆಹಚ್ಚಿದರೆ ಇದು ಚಿಕಿತ್ಸೆ ಗೆ ಉತ್ತಮವಾಗಿ ಸ್ಪಂದಿಸುತ್ತದೆ. ಶ್ರೋಣಿಯ ಭಾಗದಲ್ಲಿ ನೋವು, ಹೊಟ್ಟೆಯ ಕೆಳಭಾಗ ಅಥವಾ ಶ್ರೋಣಿಯ ಭಾಗದಲ್ಲಿ ನಿರಂತರ ನೋವು. ಅಸಾಮಾನ್ಯ ವಿಸರ್ಜನೆ ಇದರ ಪ್ರಮುಖ ಲಕ್ಷಣಗಳು. ಸ್ತನ ಕ್ಯಾನ್ಸರ್ ಎಂದರೆ ಸ್ತನದ ಜೀವಕೋಶಗಳಲ್ಲಿ, ವಿಶೇಷವಾಗಿ ಹಾಲು ಉತ್ಪಾದಿಸುವ ನಾಳಗಳಲ್ಲಿ ಕ್ಯಾನ್ಸರ್ ಕೋಶಗಳು ಅನಿಯಂತ್ರಿತವಾಗಿ ಬೆಳೆದು ಗಡ್ಡೆಯಾಗುವ ಸ್ಥಿತಿಯಾಗಿದೆ. ಇದು ಮಹಿಳೆಯರಲ್ಲಿ ಅತಿ ಹೆಚ್ಚು ಕಂಡು ಬರುವ ಕ್ಯಾನ್ಸರ್ ಆಗಿದ್ದು, ಆರಂಭಿಕ ಪತ್ತೆ ಹಚ್ಚುವಿಕೆ ಮತ್ತು ಚಿಕಿತ್ಸೆಯಿಂದ ಗುಣಪಡಿಸಬಹುದು ಎಂದು ಅಭಿಪ್ರಾಯಪಟ್ಟರು.

ಜಿಲ್ಲಾ ಕಸಾಪ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಮಾತನಾಡಿ, ಭಾರತದಲ್ಲಿ ತಾಯಂದಿರ ದಿನವು ಅಪಾರ ಸಾಂಸ್ಕೃತಿಕ ಮತ್ತು ಭಾವನಾತ್ಮಕ ಮಹತ್ವವನ್ನು ಹೊಂದಿದ್ದು, ತಾಯಂದಿರು ಮತ್ತು ತಾಯಂದಿರ ವ್ಯಕ್ತಿಗಳ ನಿಸ್ವಾರ್ಥ ಪ್ರೀತಿ ಮತ್ತು ತ್ಯಾಗಗಳನ್ನು ಗೌರವಿಸುತ್ತದೆ. ಇದು ಮಕ್ಕಳು ಮತ್ತು ಅವರ ತಾಯಂದಿರ ನಡುವಿನ ಬಾಂಧವ್ಯವನ್ನು ಬಲಪಡಿಸುತ್ತದೆ, ಅವರ ಮಾರ್ಗದರ್ಶನ ಮತ್ತು ಬೆಂಬಲವನ್ನು ಪ್ರಶಂಸಿಸಲು ಜ್ಞಾಪನೆಯಾಗಿ ಕಾರ್ಯ ನಿರ್ವಹಿಸುತ್ತದೆ ಎಂದರು.

ಭಾರತ್ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಉಪಾಧ್ಯಕ್ಷೆ ಎಂ.ಬಿ.ಗಿರಿಜಾಂಬಿಕ, ಜಿಲ್ಲಾ ಕಾರ್ಯದರ್ಶಿ ಸುರೇಶ್ ಗುರೂಜಿ, ಜಿಲ್ಲಾ ಗೈಡ್ ಆಯುಕ್ತೆ ಜಯ ರಮೇಶ್, ಆಲೂರು ತಾಲ್ಲೂಕು ಕಾರ್ಯದರ್ಶಿ ಕೊಟ್ರೇಶ್ ಎಸ್.ಉಪ್ಪಾರ್, ಜಿಲ್ಲಾ ತರಬೇತಿ ಆಯುಕ್ತ ಎಂ.ಎಸ್.ಪ್ರಕಾಶ್, ಹಿರಿಯ ಗೈಡ್ ಕ್ಯಾಪ್ಟನ್ ಎಚ್.ಜಿ.ಕಾಂಚನಮಾಲ, ಜಿಲ್ಲಾ ಖಜಾಂಚಿ ಆರ್.ಎಸ್.ರಮೇಶ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್.ಎಂ. ಪ್ರಿಯಾಂಕ, ಶಿಬಿರ ನಾಯಕಿ ಬಿ.ಎಲ್.ಮಮತ, ಸಂಪನ್ಮೂಲ ವ್ಯಕ್ತಿ ಸೋಫಿಯಾ ಫರ್ನಾಂಡೀಸ್, ಗೈಡ್ ಕ್ಯಾಪ್ಟನ್ ಲತಾಮಣಿ ಎಂ.ಕೆ.ತುರುವೇಕೆರೆ ಉಪಸ್ಥಿತರಿದ್ದರು.

## ಖಾರಿಫ್ ಬೆಳೆಗೆ ಕನಿಷ್ಟ ಬೆಂಬಲ ಬೆಲೆ ಘೋಷಣೆ

• ಪ್ರಜೋದಯ ವರದಿ

**ನವದೆಹಲಿ:** ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾಗಿರುವ ಜಾಗತಿಕ ಅಸ್ಥಿರತೆಯ ಸಮಯದಲ್ಲಿ ರೈತರಿಗೆ ಸಹಾಯ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಪ್ರಮುಖ ನಿರ್ಧಾರ ಕೈಗೊಂಡಿದೆ.

2026–27ರ ಖಾರಿಫ್ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ಘೋಷಣೆ, ಕಲ್ಲಿದ್ದಲು ಅನಿಲೀಕರಣ ಮತ್ತು ಅರೆ-ಹೈ-ಸ್ಪೀಡ್ ಡಬಲ್ ಲೈನ್ ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಅಸ್ತು ನೀಡಿದೆ.

ಸಚಿವ ಸಂಪುಟದಲ್ಲಿ ಕೈಗೊಂಡ ನಿರ್ಧಾರಗಳ ಬಗ್ಗೆ ಮಾಹಿತಿ ನೀಡಿರುವ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು, ನಾವು ಎದುರಿಸುತ್ತಿರುವ ಭೌಗೋಳಿಕ ರಾಜಕೀಯ ಪರಿಸ್ಥಿತಿಯ ಬಗ್ಗೆ ಎಲ್ಲರಿಗೂ ತಿಳಿದಿದೆ. ಈ ಸಂದರ್ಭದಲ್ಲಿ ನಾವು ಸ್ವಾವಲಂಬಿಗಳಾಗಲು ಅಗತ್ಯವಿರುವ ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಹೇಳಿದರು.

ಕೇಂದ್ರ ಸರ್ಕಾರವು ಪ್ರಮುಖವಾಗಿ ಖಾರೀಫ್ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ನೀಡಲು ನಿರ್ಧರಿಸಿದ್ದು, ಇದು ದೇಶದ ರೈತಾಪಿ ವರ್ಗಕ್ಕೆ ಬಲ ನೀಡಲಿದೆ. ಜೊತೆಗೆ ಕಲ್ಲಿದ್ದಲು ಅನಿಲೀ ಕರಣ ಕೂಡ ಇಂದಿನ ಕೇಂದ್ರ ಸಂಪುಟ ಸಭೆಯಲ್ಲಿ ಕೈಗೊಂಡ ಮಹತ್ವದ ನಿರ್ಧಾರಗಳಲ್ಲಿ ಒಂದಾಗಿದೆ ಅಶ್ವಿನಿ ವೈಷ್ಣವ್ ಸ್ಪಷ್ಟಪಡಿಸಿದರು.

ಭಾರತದಲ್ಲಿ ಕಲ್ಲಿದ್ದಲಿನ ಹೇರಳ ಪೂರೈಕೆ ಇದೆ. ಮುಂದಿನ 200 ವರ್ಷಗಳ ಅವಶ್ಯಕತೆಗಳನ್ನು ಪೂರೈಸುವಷ್ಟು ಕಲ್ಲಿದ್ದಲು ನಮ್ಮ ಬಳಿ ಇದೆ. ಆ ಕಲ್ಲಿದ್ದಲನ್ನು ಬಳಸಿಕೊಂಡು ನಾವು ಅನಿಲ ವನ್ನು ಉತ್ಪಾದಿಸಬಹುದಾಗಿದ್ದು, ಈ ನಿಟ್ಟಿನಲ್ಲಿ ಕೇಂದ್ರ ಸಚಿವ ಸಂಪುಟ ಹಸಿರು ನಿಶಾನೆ ತೋರಿದೆಯೆಂದು ಸಚಿವರು ಮಾಹಿತಿ ನೀಡಿದರು.

ಭಾರತವು 2026ರ ಹಣಕಾಸು ವರ್ಷದಲ್ಲಿ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲು 134.7 ಬಿಲಿಯನ್ ಅಮೇರಿಕನ್ ಡಾಲರ್ ಹಣವನ್ನು ಆಮದು ಮಾಡಿ ಕೊಂಡಿದೆ. ಇದು ವಿದೇಶಿ ವಿನಿಮಯ ಮೀಸಲು ಮೇಲೆ ಸಹಜವಾಗಿ ಪರಿಣಾಮ ಬೀರುತ್ತದೆ. ಭಾರತೀಯರಿಗೆ ಪ್ರಧಾನಿ ಮೋದಿ ಉಳಿತಾಯ ಸಲಹೆ ನೀಡಿದ ಬೆನ್ನಲ್ಲೇ ಕೇಂದ್ರ ಸರ್ಕಾರ ಚಿನ್ನದ ಮೇಲಿನ ಆಮದು ಸುಂಕ ಏರಿಕೆ ಮಾಡಿರುವುದನ್ನು ಸ್ಮರಿಸಬಹುದು.

## ಮೋದಿ ಮಿತವ್ಯಯ ಸಲಹೆಗೆ ಬಿಜೆಪಿ ಸ್ಪಂದನೆ



• ಪ್ರಜೋದಯ ವರದಿ

**ಬೆಂಗಳೂರು:** ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಕಚ್ಚಾ ತೈಲ ಕೊರತೆಯಿಂದ ಪಾರಾಗಲು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಸಲಹೆ ಪಾಲಿಸಲು ಕರ್ನಾಟಕ ಬಿಜೆಪಿ ಮುಂದಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾ ಡಿದ ವಿಪಕ್ಷ ನಾಯಕ ಆರ್. ಅಶೋಕ್ ಅವರು, ತಮಗೆ ನೀಡಿರುವ ಬೆಂಗಾವಲು ವಾಹನದ ಬಳಕೆಯನ್ನು ಕಡಿತಗೊಳಿಸಲು ನಿರ್ಧಾರ ಮಾಡಿ ದ್ದೇನೆ. ಜೊತೆಗೆ ಮೆಟ್ರೋದಲ್ಲಿ ವಾರದಲ್ಲಿ ಒಂದೆರಡು ದಿನಗಳ ಕಾಲ ಪ್ರಯಾಣ ಮಾಡಲು ತೀರ್ಮಾನ ಮಾಡಿದ್ದೇನೆಂದು ಹೇಳಿದರು.

ನಾವೂ ಮೋದಿಯವರ ಕರೆಗೆ ಬೆಂಬಲಿಸಿದ್ದೇವೆ. ಶೇ.30 ರಿಂದ 40 ವಾಹನಗಳ ಬಳಕೆ ಕಡಿಮೆ ಮಾಡುತ್ತೇವೆ. ದಿನ ಬಿಟ್ಟು ದಿನ ಬೆಂಗಾವಲು ವಾಹನಗಳ ಬಳಕೆ ಮಾಡು ತ್ತೇವೆ. ಮದುವೆಗಳಿಗೆ ಹೋದಾಗ ಎಲ್ಲಾ ವಾಹನ ಗಳನ್ನು ಬಳಕೆ ಮಾಡುವುದಿಲ್ಲ. ನಮ್ಮ ಮನೆಗಳಲ್ಲೂ ಬೆಂಬಲಿಸಿ ದ್ದಾರೆ. ಅಡುಗೆ ಎಣ್ಣೆ ಬಳಕೆ ಯಲ್ಲೂ ನಮ್ಮ ಮನೆಯಲ್ಲಿ ಕಡಿತ ಮಾಡಿದ್ದಾರೆಂದರು.

**ಸರ್ಕಾರಕ್ಕೆ ಬಸ್ ಡೇ ಮಾಡಲು ಪತ್ರ**

ಆರ್.ಅಶೋಕ್ ಸಾರಿಗೆ ಸಚಿವರಾಗಿದ್ದ ಸಂದ ರ್ಭದಲ್ಲಿ ಬಸ್ ಡೇ ಮಾಡಿದ್ದರು. ಎಲ್ಲಾ ಸರ್ಕಾರಿ ಅಧಿಕಾರಿಗಳು ವಾರಕ್ಕೊಂದು ದಿನ ಬಸ್‌ನಲ್ಲಿ ಪ್ರಯಾಣ ಮಾಡಲು ಸೂಚನೆ ನೀಡಿದ್ದರು. ಇದು ತಕ್ಕಮಟ್ಟಿಗೆ ಯಶಸ್ವಿಯೂ ಆಗಿತ್ತು. ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಕುರಿತಾಗಿ ಪತ್ರ ಬರೆಯಲು ಅಶೋಕ್ ನಿರ್ಧರಿಸಿದ್ದಾರೆ.

ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಬಸ್ ಡೇ ಜಾರಿ ಮಾಡಿದ್ದೇವು. ನಾನು ಕೂಡ ವಿಧಾನ ಸೌಧಕ್ಕೆ ಬಸ್‌ನಲ್ಲೇ ಬಂದು ಹೋಗುತ್ತಿದ್ದೆ. ಅಧಿಕಾರಿಗಳೂ ಬಸ್‌ನಲ್ಲಿ ಓಡಾಡುತ್ತಿದ್ದರು. ಅದೇ ಮಾದರಿಯ ಕ್ರಮಗಳನ್ನು ಈ ಸರ್ಕಾರ ಕೈಗೊಳ್ಳಬೇಕು. ನಾನೂ ಕೂಡ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ. ಯುದ್ಧ ನಿಲ್ಲುವ ಲಕ್ಷಣ ಇಲ್ಲ. ಯುದ್ಧದ ಸಂದರ್ಭದಲ್ಲಿ ಕಾಂಗ್ರೆಸ್ ಚಿಲ್ಲರೆ ಬುದ್ಧಿ ಬಿಡಬೇಕೆಂದು ಮನವಿ ಮಾಡಿದರು.

### ಬೆಂಗಾವಲು ವಾಹನ ತಗ್ಗಿಸಿದ ಪ್ರಧಾನಿ

» ಮೊದಲನೇ ಪುಟದಿಂದ

ಗುಜರಾತ್ ರಾಜ್ಯಪಾಲರು ಹೆಲಿಕಾಪ್ಟರ್ ಅಥವಾ ವಿಮಾನಗಳ ಬದಲಿಗೆ ರಾಜ್ಯದೊಳಗೆ ಪ್ರಯಾಣಿಸಲು ರೈಲು ಮತ್ತು ಬಸ್‌ಗಳನ್ನು ಬಳಸಲು ನಿರ್ಧರಿಸಿದ್ದಾರೆ. ಇನ್ನು ರಾಜ್ಯದ ಉಪಮುಖ್ಯಮಂತ್ರಿ ಹರ್ಷ ಸಂಘವಿ ಅವರು ತಮ್ಮ ನಿಗದಿತ ಅಮೇರಿಕಾ ಪ್ರವಾಸವನ್ನು ರದ್ದುಗೊಳಿಸುವ ಮೂಲಕ ವಿದೇಶಿ ಪ್ರಯಾಣದ ವೆಚ್ಚಕ್ಕೆ ಕಡಿವಾಣ ಹಾಕಿದ್ದಾರೆ.

ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು, ಛತ್ತೀಸಗಢ ಮುಖ್ಯಮಂತ್ರಿ ವಿಷ್ಣು ಸಾಯಿ ಮತ್ತು ಹಿಮಾಚಲ ಪ್ರದೇಶದ ರಾಜ್ಯಪಾಲ ಕವಿಂದರ್ ಗುಪ್ತಾ ಸಹ ಮೋದಿ ಅವರ ಸಲಹೆಯನ್ನು ಅನುಸರಿಸಲು ಮುಂದಾಗಿದ್ದಾರೆ.

ಸರ್ಕಾರದ ಈ ಕ್ರಮಗಳು ಕೇವಲ ಇಂಧನ ಉಳಿತಾಯ ಮಾತ್ರವಲ್ಲದೆ, ಸಾರ್ವಜನಿಕ ಹಣದ ದುಂದುವೆಚ್ಚವನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸಲಿವೆ. ಜನಪ್ರತಿನಿಧಿಗಳೇ ನೇರವಾಗಿ ಸಾರ್ವಜನಿಕ ಸಾರಿಗೆ ಬಳಕೆಗೆ ಮುಂದಾಗಿರುವುದು ಜನಸಾಮಾನ್ಯರಲ್ಲಿ ಮೆಚ್ಚುಗೆಗೆ ಕಾರಣವಾಗಿದೆ.

## ಪ್ರಸ್ತಾವ ಒಪ್ಪಿ ಇಲ್ಲವೇ ಸೋಲೊಪ್ಪಿಕೊಳ್ಳಿ: ಇರಾನ್ ಎಚ್ಚರಿಕೆ

• ಪ್ರಜೋದಯ ವರದಿ

**ಟೆಹರಾನ್:** ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವುದಕ್ಕೆ ಸಂಬಂಧಿಸಿ ನಾವು ಮುಂದಿಟ್ಟಿರುವ 14 ಅಂಶಗಳ ಪ್ರಸ್ತಾವ ವನ್ನು ಒಪ್ಪಿಕೊಳ್ಳಿ ಅಥವಾ ಸೋಲು ಸ್ವೀಕರಿಸಿ ಎಂದು ಇರಾನ್ ಅಮೇರಿಕಾಗೆ ಎಚ್ಚರಿಕೆ ನೀಡಿದೆ.

ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಎದುರು ಇರಾನ್ ಮುಂದಿಟ್ಟಿರುವ 9 ಅಂಶಗಳ ಪ್ರಸ್ತಾವಕ್ಕೆ ಪ್ರತಿಯಾಗಿ, ಇರಾನ್ ಮಧ್ಯಸ್ಥಿಕೆದಾರರು ಈ ಪ್ರತಿಕ್ರಿಯೆ ನೀಡಿದ್ದಾರೆ. ಅಮೇರಿಕಾ–ಇರಾನ್ ನಡುವೆ ಕಳೆದ ತಿಂಗಳು ನಡೆದ ಆರಂಭಿಕ ಸುತ್ತಿನ ಮಾತುಕತೆಯು ಯಾವುದೇ ಪ್ರಗತಿ ಸಾಧಿಸುವಲ್ಲಿ ವಿಫಲವಾಗಿದೆ. ಹಾಗಾಗಿ ಎರಡು ತಿಂಗಳಿಂದ ಮುಂದುವರಿದಿರುವ ಸಂಘರ್ಷ ಕೊನೆಗೊಳ್ಳಬೇಕಾದರೆ ಅಮೇರಿಕಾದ ಮುಂದೆ ಇರಾನ್ ಇಟ್ಟಿರುವ ಪ್ರಸ್ತಾವವನ್ನು ಒಪ್ಪದೆ ಪರ್ಯಾಯ ಆಯ್ಕೆಗಳಿಲ್ಲವೆಂದು ಇರಾನ್‌ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಹೇಳಿದ್ದಾರೆ.

ಇರಾನ್ ಸಲ್ಲಿಸಿರುವ ಪ್ರಸ್ತಾವವನ್ನು ತಿರಸ್ಕರಿಸುವ ಟ್ರಂಪ್, ಅಮೇರಿಕಾ–ಇರಾನ್ ನಡುವೆ ಏಪ್ರಿಲ್ 8ರಿಂದ ದುರ್ಬಲ ಕದನ ವಿರಾಮ ಜಾರಿಯಲ್ಲಿದ್ದು, ಸದ್ಯ ಜೀವ ರಕ್ಷಕ ವ್ಯವಸ್ಥೆಯ ಬೆಂಬಲದಲ್ಲಿದೆ ಎಂದು ಹೇಳಿದ್ದಾರೆ. ಇರಾನ್ ಪ್ರಸ್ತಾವವನ್ನು ಒಪ್ಪದೆ ಬೇರೆ ಯಾವುದೇ ವಿಧಾನವು ಸಂಘರ್ಷಕ್ಕೆ ತೆರೆ ಎಳೆಯುವುದಿಲ್ಲ. ಅಮೇ ರಿಕಾವು ಬೇರೊಂದು ಪ್ರಯತ್ನಕ್ಕೆ ಮುಂದಾದರೆ ಅದು ಮತ್ತೊಂದು ವೈಫಲ್ಯವಲ್ಲದೆ ಮತ್ತೇನೂ ಅಲ್ಲವೆಂದು ಮೊಹಮ್ಮದ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



ಅಮೇರಿಕಾದ ಪ್ರಸ್ತಾವಕ್ಕೆ ಒಪ್ಪದಿದ್ದರೆ, ಯಾವುದೇ ಕ್ಷಣದಲ್ಲಿ ಬೇಕಾದರೂ ಭಾರೀ ದಾಳಿ ನಿರೀಕ್ಷಿಸಬಹುದೆಂಬ ಅಮೇರಿಕಾದ ಬೆದರಿಕೆಗೆ ಇರಾನ್ ಮಣಿದಿಲ್ಲ. ಬದಲಿಗೆ, ಯುದ್ಧವನ್ನು ಅಮೇರಿಕದ ಎಷ್ಟು ದಿನ ಮುಂದುವರಿಸುತ್ತದೆಯೋ, ಅಲ್ಲಿಯವರೆಗೆ ಅಮೇರಿಕಾದ ತೆರಿಗೆದಾರರು ದಂಡ ತೆರಬೇಕಾಗುತ್ತದೆಂದು ಹೇಳಿದೆ.

**ಪ್ರಸ್ತಾವ ಒಪ್ಪದ ಇರಾನ್**

ಹೊರ್ಮುಜ್‌ಜಲಸಂಧಿ ಮೂಲಕ ಹಡಗುಗಳ ಸಂಚಾರಕ್ಕೆ ಇರಾನ್ ನಿರ್ಬಂಧವನ್ನು ಮತ್ತಷ್ಟು ಬಿಗಿಗೊಳಿಸಿದೆ. ಅಮೇರಿಕಾವೂ ಇರಾನ್‌ನ ಬಂದರಿನ ಮೇಲೆ ಹೇರಿರುವ ದಿಗ್ಬಂಧನವನ್ನು ತೆರವುಗೊಳಿಸುವುದಿಲ್ಲವೆಂದು ಹೇಳಿದೆ. ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನದ ಮೂಲಕ ಅಮೇರಿಕಾ ಸಲ್ಲಿಸಿರುವ ಒಂದು ಪುಟದ ತಿಳಿವಳಿಕೆ ಪತ್ರದಲ್ಲಿನ ವಿವರಗಳು ಅಸ್ಪಷ್ಟವಾಗಿದ್ದು, ಮಿತಿ ಹೇರುವಂತಿವೆ ಎಂದು ಇರಾನ್ ಆಕ್ಷೇಪಿಸಿದೆ. ಮುಖ್ಯವಾಗಿ ಯುರೇನಿಯಂ ಸಮೃದ್ಧೀಕರಣದ ವಿಷಯವಾಗಿ ಅಮೇರಿಕಾ ಮುಂದಿಟ್ಟಿರುವ ಅಂಶವನ್ನು ಒಪ್ಪಿಕೊಳ್ಳಲು ಇರಾನ್ ನಿರಾಕರಿಸಿದೆ ಎಂದು ಮೂಲಗಳು ಹೇಳಿವೆ. ಅಮೇರಿಕಾವು ಈ ಅಂಶಗಳಿಗೆ ಒಪ್ಪಿಕೊಂಡರೆ, ಪ್ರತಿಯಾಗಿ ಇರಾನ್, ಅಮೇರಿಕಾದ ಯಾವೆಲ್ಲ ಬೇಡಿಕೆಗೆ ಒಪ್ಪಿಕೊಳ್ಳಲಿದೆ ಎನ್ನುವುದನ್ನು ಇರಾನ್‌ನ ವಿದೇಶಾಂಗ ಇಲಾಖೆ ಸ್ಪಷ್ಟಪಡಿಸಿಲ್ಲ.

**ಇರಾನ್ ಪ್ರಸ್ತಾವದ ಪ್ರಮುಖ ಅಂಶಗಳು**

ಇರಾನ್ ಬಂದರಿನ ಮೇಲೆ ಅಮೇರಿಕಾ ಹೇರಿರುವ ದಿಗ್ಬಂಧನವನ್ನು ತೆರವುಗೊಳಿಸಬೇಕು. ಲೆಬನಾನ್ ಮೇಲಿನ ಯುದ್ಧ ನಿಲ್ಲಿಸಬೇಕು ಹಾಗು ಇರಾನ್ ದಾಳಿಗೆ ನಿಯೋಜಿಸಿರುವ ಅಮೇರಿಕಾದ ಸೇನೆಯನ್ನು ವಾಪಾಸ್ ಕರೆಯಿಸಿಕೊಳ್ಳಬೇಕು. ಇರಾನ್‌ನ ಯುರೇನಿಯಂಸಮೃದ್ಧೀಕರಣ ಹಕ್ಕನ್ನು ಖಾತರಿಪಡಿಸಬೇಕು. ದೀರ್ಘ ಕಾಲದ ನಿರ್ಬಂಧಗಳ ಅಡಿಯಲ್ಲಿ ವಿದೇಶಗಳಲ್ಲಿ ಸ್ಥಗಿತಗೊಳಿಸಲಾದ ಇರಾನ್ ಆಸ್ತಿಯನ್ನು ಮುಕ್ತಗೊಳಿಸಬೇಕು.

## ವಿಜಯ್‌ಗೆ ಬೆಂಬಲ: ಎಐಎಡಿಎಂಕೆಯ 25 ಶಾಸಕರು ವಜಾ

• ಪ್ರಜೋದಯ ವರದಿ

**ಚೆನ್ನೈ:** ತಮಿಳುನಾಡು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರ ವಿಶ್ವಾಸಮತಯಾಚನೆ ವೇಳೆ ಸರ್ಕಾರದ ಪರವಾಗಿ ಮತ ಹಾಕಿದ ಎಐಎಡಿಎಂಕೆಯ ಶಾಸಕರನ್ನು ಪಕ್ಷದ ಎಲ್ಲಾ ಹುದ್ದೆಗಳಿಂದ ತೆಗೆದು ಹಾಕಲಾಗಿದೆ.

47 ಶಾಸಕರ ಪೈಕಿ 25 ಮಂದಿ ಸರ್ಕಾರದ ಪರವಾಗಿ ಮತ ಹಾಕಿದ್ದರು. ಈ ಹಿನ್ನಲೆಯಲ್ಲಿ ವಿಜಯ್ ಅವರಿಗೆ 144 ಮತಗಳ ಪ್ರಚಂಡ ಬೆಂಬಲ ಸಿಕ್ಕಿತ್ತು. ಈ ಸಂಬಂಧ ನಥಮ್ ಆರ್.ವಿಶ್ವನಾಥ್ ಸೇರಿ 25 ಶಾಸಕರ ವಿರುದ್ಧ ಕ್ರಮ ಕೈಗೊಂಡಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಇ.ಪಳನಿಸ್ವಾಮಿ, ಅವರ ಜಾಗದಲ್ಲಿ ಹೊಸ ಜಿಲ್ಲಾ ಕಾರ್ಯದರ್ಶಿಗಳನ್ನು ನೇಮಕ ಮಾಡಿದ್ದಾರೆ.

47 ಶಾಸಕರ ಪೈಕಿ 25 ಶಾಸಕರು ಮತ ಚಲಾಯಿಸಿರುವುದನ್ನು ಪಕ್ಷಾಂತರ ವಿರೋಧಿ ಕಾನೂನು ಅನ್ವಯವಾಗಲಿದೆಯೇ ಎಂಬ ಪ್ರಶ್ನೆ ಎದ್ದಿದೆ. ಪಕ್ಷದ ಸೂಚನೆ, ವಿಪ್ ಮೀರಿ ಮತ ಹಾಕುವುದು, ಮಾಹಿತಿ ನೀಡದೇ ರಾಜೀನಾಮೆ ನೀಡುವವರ ಮೇಲೆ ಪಕ್ಷ ವಿರೋಧಿ ಕಾಯ್ದೆಯಡಿ ಕ್ರಮ ಜರುಗಿಸಬಹುದಾಗಿದೆ. ಮೂರನೇ ಎರಡರಷ್ಟು ಶಾಸಕರು ಬೇರೊಂದು ಪಕ್ಷದ ಜೊತೆ ವಿಲೀನಗೊಂಡಾಗ ಈ ಕಾನೂನು ಅನ್ವಯವಾಗುವುದಿಲ್ಲ.

## ಕೇರಳಂ ಸಿ.ಎಂ. ಆಯ್ಕೆ ವಿಚಾರ: ಖರ್ಗೆ ನಿವಾಸಕ್ಕೆ ರಾಹುಲ್ ಭೇಟಿ

• ಪ್ರಜೋದಯ ವರದಿ



**ನವದೆಹಲಿ:** ಕೇರಳಂ ಮುಖ್ಯಮಂತ್ರಿ ಆಯ್ಕೆ ವಿಚಾರವಾಗಿ ಚರ್ಚಿಸಲು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸಕ್ಕೆ ಬುಧವಾರ ಸಂಜೆ ಭೇಟಿ ನೀಡಿದ್ದಾರೆ.

140 ಸದಸ್ಯ ಬಲದ ಕೇರಳಂ ವಿಧಾನಸಭಾ ಚುನಾವಣೆಯ ಫಲಿತಾಂಶ ಮೇ 4ರಂದೇ ಪ್ರಕಟವಾಗಿದೆ. ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) 102 ಸ್ಥಾನಗಳಲ್ಲಿ ಜಯ ಸಾಧಿಸಿದೆ. ಕಾಂಗ್ರೆಸ್ 63 ಕ್ಷೇತ್ರಗಳಲ್ಲಿ ಗೆಲುವು ಕಂಡಿದೆ. ಹೀಗಿದ್ದರೂ, ಮುಖ್ಯಮಂತ್ರಿಯನ್ನು ಆಯ್ಕೆ ಮಾಡಲು ಕಾಂಗ್ರೆಸ್‌ಗೆ ಈವರೆಗೆ ಸಾಧ್ಯವಾಗಿಲ್ಲ.

ಕಳೆದ ಐದು ವರ್ಷಗಳಿಂದ ಹಾಗೂ ಚುನಾವಣೆಯಲ್ಲಿ ಯುಡಿಎಫ್ ಅನ್ನು ಮುನ್ನಡೆಸಿರುವ ವಿ.ಡಿ.ಸತೀಶನ್ ಅವರು ಮುಖ್ಯಮಂತ್ರಿಯಾಗಲಿದ್ದಾರೆಂಬ ನಿರೀಕ್ಷೆ ಇತ್ತು. ಹಿಂದಿನ ಸರ್ಕಾರದ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರೂ ಆಗಿದ್ದ ಅವರಿಗೆ, ಮಿತ್ರ ಪಕ್ಷಗಳ ಬೆಂಬಲವೂ ಇದೆ. ಆದರೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ಹಿರಿಯ ನಾಯಕ ರಮೇಶ್ ಚೆನ್ನಿತಲ ಅವರೂ ಪೈಪೋಟಿಗೆ ಇಳಿದಿದ್ದಾರೆ. ಹೀಗಾಗಿ, ಮುಖ್ಯಮಂತ್ರಿ ಆಯ್ಕೆ ವಿಚಾರ ಕಾಂಗ್ರೆಸ್ ಹೈಕಮಾಂಡ್ ಪಾಲಿಗೆ ತಲೆನೋವಾಗಿ ಪರಿಣಮಿಸಿದೆ.

## ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ 5.25 ಲ.ರೂ. ದಂಡ

» ಮೊದಲನೇ ಪುಟದಿಂದ

ಈ ಹಿಂದೆ ಹಾಸನದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ಆರೋಗ್ಯ ಹದಗೆಟ್ಟಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕಳುಹಿಸಿಕೊಟ್ಟಿದ್ದರು. ರಾಜು ಅವರ ಹೃದಯ ಬಡಿತ ಕಡಿಮೆಯಾದ್ದರಿಂದ ಸೂಕ್ತ ಚಿಕಿತ್ಸಾ ಕ್ರಮ ಕೈಗೊಂಡಿದ್ದರೂ ಸಾವನ್ನಪ್ಪಿದ್ದಾರೆ. ಈ ಘಟನೆಯಲ್ಲಿ ತಮ್ಮಿಂದ ಯಾವ ಲೋಪದೋಷಗಳಾಗಿಲ್ಲವೆಂದು ವಾದ ಮಂಡಿಸಿದ್ದರು.

ವಾದ–ವಿವಾದ ಹಾಗು ಹಾಜರುಪಡಿಸಿದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಪೀಠವು, ದಾಖಲಾತಿಗಳ ಪ್ರಕಾರ ಹೃದಯ ಸ್ತಂಭನದಿಂದ ಮರಣ ಸಂಭವಿಸಿಲ್ಲ. ಜೆಎಸ್‌ಎಸ್ ಆಸ್ಪತ್ರೆಯ ಕೇಸ್ ಶೀಟ್‌ನಲ್ಲಿ ಆಸ್ಪಿರೇಷನ್ ವಿವರ ಮತ್ತು ಚಿಕಿತ್ಸೆ ವಿಧಾನ ದಾಖಲಿಸದ ಕಾರಣ ನಮೂದಿಸಿದ ವಿವರಕ್ಕೂ ಮರಣದ ಕಾರಣಕ್ಕೂ ತಾಳೆಯಾಗದ ಹಿನ್ನಲೆಯಲ್ಲಿ ವೈದ್ಯರ ನಿರ್ಲಕ್ಷ್ಯಕ್ಕೆ ಆಸ್ಪತ್ರೆಯನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆಂದು ಆಯೋಗ ಸ್ಪಷ್ಟಪಡಿಸಿದೆ. 45 ದಿನಗಳ ಒಳಗೆ ಸೇವಾ ನ್ಯೂನ್ಯತೆಗಾಗಿ 5 ಲ.ರೂ., ಮಾನಸಿಕ ಹಿಂಸೆಗಾಗಿ 25 ಸಾವಿರ ರೂ. ದೂರುದಾರರಿಗೆ ನೀಡಬೇಕೆಂದು ಆದೇಶಿಸಲಾಗಿದೆ.

### ಬೇಲೂರು-ಸಕಲೇಶಪುರ ಭಾಗದಲ್ಲಿ 25ಕ್ಕೂ ಹೆಚ್ಚು ಕಾಡಾನೆಗಳ ಸಂಚಾರ

» ಮೊದಲನೇ ಪುಟದಿಂದ

ತೋಟ, ತಂಬಲಗೇರಿ ಗ್ರಾಮದ ಏರಳ್ ಗದ್ದೆ, ಬಾಚಿಹಳ್ಳಿ ಗ್ರಾಮದ ಹೊನ್ನೆಮನೆ ಕಾಡು, ದಬ್ಬಳ್ಳಿ ಜಯಣ್ಣ ಅವರ ತೋಟ, ಮೆಕ್ಕಿರಮನೆ ಗ್ರಾಮದ ಹಂಚಿನ ಮನೆಕಾಡು, ಬಿಸ್ಲೆ ಹಡ್ಲು, ಐಗೂರು ಹಳೆ ನರ್ಸರಿ, ಕೆರೋಡಿ ಗ್ರಾಮದ ಎಂ.ಎಸ್. ನಾಗೇಶ್ ಅವರ ತೋಟದ ಸುತ್ತ ಮುತ್ತ ಕಾಡಾನೆಗಳು ಕಂಡು ಬಂದಿವೆ. ಆಲೂರು ತಾಲ್ಲೂಕಿನ ಅಬ್ಬನ ಕೊಪ್ಪಲು ಗ್ರಾಮದ ಅಕೇಶಿಯ ನಡುತೋಪು ಸುತ್ತಮುತ್ತ ಕಾಡನೆಗಳ ಹಿಂಡು ಬೀಡುಬಿಟ್ಟಿದೆ.

## ವಿದ್ಯಾರ್ಥಿಗಳು ಅಂಕಗಳಿಕೆಗಷ್ಟೇ ಸೀಮಿತರಾಗಬಾರದು

• ಪ್ರಜೋದಯ ವರದಿ

**ಬೇಲೂರು:** ವಿದ್ಯಾರ್ಥಿಗಳು ಪಠ್ಯ ಪುಸ್ತಕ ಅಧ್ಯಯನ ಜೊತೆಗೆ ಕ್ರೀಡಾ ಕೂಟಗಳಲ್ಲಿ ಭಾಗವ ಹಿಸಿದರೆ ದೈಹಿಕ ಮತ್ತು ಮಾನಸಿಕವಾಗಿ ಸದೃಢಗೊಳ್ಳಲು ಸಾಧ್ಯವಾಗುತ್ತದೆ. ಅಂಕಗಳಿಕೆಗಷ್ಟೇ ಮಕ್ಕಳು ಸೀಮಿತರಾಗಬಾರದೆಂದು ಪುರಸಭೆ ಅಧ್ಯಕ್ಷ ಅಕ್ರಂ ಷರೀಫ್ ಅವರು ಹೇಳಿದರು.

ಪಟ್ಟಣದ ವೈಡಿಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗು ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ಬುಧವಾರ ಆಯೋಜಿಸಿದ್ದ ಹಾಸನ ವಿಶ್ವವಿದ್ಯಾಲಯ ಮಟ್ಟದ ಅಂತರ ಕಾಲೇಜು ಪುರುಷರ ವಿಭಾಗದ ವಾಲಿಬಾಲ್ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾಭ್ಯಾಸದ ಸಂದರ್ಭ ಕ್ರೀಡೆ ವಿದ್ಯಾರ್ಥಿಗಳ ಪಾಲಿಗೆ ಅತಿಮುಖ್ಯವಾಗಿದೆ. ಓದಿನ ಜೊತೆಗೆ ದೈಹಿಕ ಸದೃಢತೆಗೆ ಕ್ರೀಡೆ ಪ್ರಯೋಜನವಾಗುತ್ತದೆ. ವಿದ್ಯಾರ್ಥಿಗಳು ವಿದ್ಯೆಯ ಜೊತೆ ಕ್ರೀಡೆ ಸೇರಿ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಭಾಗವಹಿಸಬೇಕೆಂದರು.

ಇತ್ತೀಚಿನ ದಿನಗಳಲ್ಲಿ ಕ್ರೀಡಾ ಕೋಟಾದಲ್ಲಿ ಸರ್ಕಾರಿ ನೌಕರಿ ಹಾಗು ವಿವಿಧ ವೃತ್ತಿಗಳಲ್ಲಿ ಅವಕಾಶ ಪಡೆಯಬಹುದಾಗಿದೆ. ಪುರಸಭೆಯಿಂದ ಉತ್ತಮ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲಾಗುವುದು. ಈ ಕ್ರೀಡಾಕೂಟ ಉದ್ಘಾಟಿಸಿದ್ದು ಖುಷಿ ತಂದಿದೆ ಎಂದರು.



ವೈಡಿಡಿ ಪ್ರಥಮ ದರ್ಜೆ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಹೆಬ್ಬಾಳು ಹಾಲಪ್ಪ ಅವರು ಮಾತನಾಡಿ, ವೈಡಿಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ಹಾಸನ ವಿಶ್ವವಿದ್ಯಾಲಯದ ಕ್ರೀಡಾ ಕೂಟದಲ್ಲಿ ವೈಡಿಡಿ ಕಾಲೇಜು ವಿದ್ಯಾರ್ಥಿಗಳು ಪ್ರಶಸ್ತಿ ಪಡೆದಿರು ವುದು ಹೆಮ್ಮೆಯ ವಿಷಯ. ಕ್ರೀಡೆಯ ಜೊತೆಗೆ ವಿದ್ಯಾಭ್ಯಾಸದಲ್ಲೂ ಮುಂದಾಗಿ ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಪ್ರಾಂಶುಪಾಲ ಡಾ.ಮಹೇಶ್ ಅವರು ಮಾತನಾಡಿ, ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಇತ್ತೀಚಿನ ದಿನಗಳಲ್ಲಿ ಫಲಿತಾಂಶದಲ್ಲಿ ಪ್ರಥಮ ಸ್ಥಾನ ಮತ್ತು ಕ್ರೀಡಾಕೂಟದಲ್ಲಿ ಚಾಂಪಿಯನ್ ಶಿಪ್ ಪಡೆದಿದ್ದಾರೆ. ಆದರೂ ಕೆಲವರು ಕಾಲೇಜಿನ ಬಗ್ಗೆ ಇಲ್ಲಸಲ್ಲದ ಅಪವಾದ ಮಾಡುವುದು ಬೇಸರ ತರಿಸಿದೆ. ಇತ್ತೀಚೆಗೆ ಬಂದಿರುವ ಕಾಲೇಜು ಅಭಿವೃದ್ಧಿ ಸಮಿತಿಯವರ ಪ್ರೋತ್ಸಾಹ ಹೆಚ್ಚಿದ್ದು, ಎಲ್ಲರ ಸಹಕಾರದೊಂದಿಗೆ ಇಂತಹ ಕ್ರೀಡಾಕೂಟ ಆಯೋಜಿಸಲು ಸಾಧ್ಯವಾಗಿದೆ ಎಂದರು.

ಹಾಸನ ವಿಶ್ವವಿದ್ಯಾಲಯ ಸಂಯೋಜಕ ಪ್ರಕಾಶ್ ಕುಮಾರ್, ಪತ್ರಕರ್ತರ ಸಂಘದ ಉಪಾಧ್ಯಕ್ಷ ವೆಂಕಟೇಶ್, ದೈಹಿಕ ಶಿಕ್ಷಣ ನಿರ್ದೇಶಕ ಮತ್ತು ಸಂಘಟನಾ ಕಾರ್ಯದರ್ಶಿ ಬಾಬು ಪ್ರಸಾದ್, ಹಾಸನ ದೈಹಿಕ ಶಿಕ್ಷಣ ವಿಭಾಗದ ಸಹ ನಿರ್ದೇಶಕ ಚಂದ್ರನಾಯಕ್, ಪುರಸಭೆ ಸದಸ್ಯ ಪ್ರಭಾಕರ್, ಜಾನಪದ ಪರಿಷತ್ತು ಅಧ್ಯಕ್ಷ ಸಿದ್ದೇಗೌಡ ಮೊದಲಾದವರಿದ್ದರು.

## ಹಬ್ಬಕ್ಕೆಂದು ತೆರಳಿದ್ದ ದಂಪತಿ ನಾಪತ್ತೆ

• ಪ್ರಜೋದಯ ವರದಿ

**ಅರಸೀಕೆರೆ:** ಹಬಕ್ಕೆಂದು ತೆರಳಿದ್ದ ದಂಪತಿ ನಾಪತ್ತೆಯಾಗಿರುವ ಪ್ರಕರಣ ತಾಲ್ಲೂಕಿನ ಜಕ್ಕನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗಂಡಸಿ ಹೋಬಳಿ ಜಕ್ಕನಹಳ್ಳಿಯ ಮಂಜೇಗೌಡ ಹಾಗು ಮಂಜುಳ ನಾಪತ್ತೆಯಾದವರು. ಮೇ 7ರಂದು ಕಬ್ಬಳ್ಳಿ ಹೊಸಹಳ್ಳಿ ಗ್ರಾಮದಲ್ಲಿ ಜರುಗಿದ ಹಬ್ಬಕ್ಕೆ ಹೋಗಿ ಬರುವುದಾಗಿ ಹೇಳಿ ಹೋದವರು ವಾಪಾಸ್ ಬಂದಿಲ್ಲ. ಕಳೆದ ಒಂದು ವಾರದಿಂದ ಎಲ್ಲಾ ಹುಡುಕಿದರೂ ಸುಳಿವು ಸಿಗದ ಹಿನ್ನಲೆಯಲ್ಲಿ ಗಂಡಸಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಲಾಗಿದೆ.

68 ವರ್ಷದ ಮಂಜೇಗೌಡ 4.2 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಬಣ್ಣ, ದುಂಡು ಮುಖ ಹೊಂದಿದ್ದು ಕನ್ನಡ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಬಿಳಿ ಶರ್ಟ್ ಮತ್ತು ಬಿಳಿ ಪಂಚೆ ಧರಿಸಿದ್ದರು. 64 ವರ್ಷದ ಮಂಜುಳ 5.2 ಅಡಿ ಎತ್ತರವಿದ್ದು ಕೆಂಪು, ಕಾಫಿ ಬಣ್ಣದ ಸೀರೆ, ಕಾಫಿ ಬಣ್ಣದ ರವಿಕೆ ಧರಿಸಿದ್ದಾರೆ. ಅವರ ಸುಳಿವು ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆ ಅಥವಾ ಮೊ.ನಂ. 9480804755 ಇಲ್ಲಿಗೆ ಸಂಪರ್ಕಿಸಲು ತಿಳಿಸಿದೆ.

## ಜೂಜು ಆಡಿಸುತ್ತಿದ್ದ ವ್ಯಕ್ತಿ ಬಂಧನ

• ಪ್ರಜೋದಯ ವರದಿ

**ಹಾಸನ:** ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಜೂಜು ಆಡಿಸುತ್ತಿದ್ದ ವ್ಯಕ್ತಿಯನ್ನು ಬಂಧಿಸಿರುವ ಪೊಲೀಸರು ಪಣಕ್ಕಿಟ್ಟಿದ್ದ 1140 ರೂ. ವಶಪಡಿಸಿಕೊಂಡಿದ್ದಾರೆ.

ಮೆಹಬೂಬ್ ನಗರ ನಿವಾಸಿ ಖಾಲಕ್ ಬಂಧಿತ ಆರೋಪಿ. ಹಳೇ ಮಟನ್ ಮಾರ್ಕೆಟ್ ಸರ್ಕಲ್‌ನಲ್ಲಿ ಒಂದು ರೂಪಾಯಿಗೆ 80 ರೂ. ಕೊಡುವುದಾಗಿ ಸಾರ್ವಜನಿಕರನ್ನು ಕರೆಯುತ್ತಿದ್ದನು. ವಿಷಯ ತಿಳಿದು ಸ್ಥಳಕ್ಕೆ ದೌಡಾಯಿಸಿದ ಪೆನ್ಷನ್ ಮೊಹಲ್ಲಾ ಠಾಣೆ ಪೊಲೀಸರು ಆತನನ್ನು ವಶಕ್ಕೆ ಪಡೆದಿದ್ದಾರೆ.

## ಮಳೆಗಾಲಕ್ಕೂ ಮುನ್ನ ಪೌರಕಾರ್ಮಿಕರಿಗೆ ವಸತಿ ಸೌಲಭ್ಯ

• ಪ್ರಜೋದಯ ವರದಿ

**ಸಕಲೇಶಪುರ:** ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಪೌರಕಾರ್ಮಿಕರ ವಸತಿ ನಿರ್ಮಾಣ ಕಾಮಗಾರಿಗೆ ಚಾಲನೆ ದೊರೆತಿದ್ದು, ಮಳೆಗಾಲ ಆರಂಭಕ್ಕೂ ಮುನ್ನ ಪೌರಕಾರ್ಮಿಕರಿಗೆ ಸೂರು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಕುಶಾಲನಗರದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಾಣವಾಗುತ್ತಿರುವ ಪೌರ ಕಾರ್ಮಿಕರ ವಸತಿ ಸಮುಚ್ಚಯಕ್ಕೆ ಭೇಟಿ ನೀಡಿ ಅವರು ಕಾಮಗಾರಿ ಪರಿಶೀಲಿಸಿ ಮಾತನಾಡಿದ ಅವರು, ಕಳೆದ ದಶಕಗಳಿಂದ ಕುಂಟುತ್ತಾ ಸಾಗುತ್ತಿದ್ದ ವಸತಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವ ಉದ್ದೇಶದಿಂದ ವಸತಿ ಸಚಿವರಾದ ಜಮೀರ್ ಅಹ್ಮದ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿ ಕಾಮಗಾರಿ ಪುನರಾರಂಭಕ್ಕೆ ಮನವಿ ಮಾಡಲಾಗಿತ್ತು ಎಂದು ತಿಳಿಸಿದರು.

ತಮ್ಮ ಮನವಿಗೆ ಸ್ಪಂದಿಸಿದ ಸಚಿವರು ಗುತ್ತಿಗೆದಾರರಿಗೆ ಕಾಮಗಾರಿ ಮರು ಪ್ರಾರಂಭಿಸಲು ಸೂಚನೆ ನೀಡಿದ್ದು, ಕಳೆದ ಮೂರು ದಿನಗಳಿಂದ ಕಾಮಗಾರಿ ಮತ್ತೆ ಆರಂಭಗೊಂಡಿದೆ. ಮಳೆಗಾಲ ಆರಂಭಕ್ಕೂ ಮುನ್ನವೇ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾ ಗಿದೆ ಎಂದರು.



ಪ್ರತಿದಿನ ಬೆಳಗ್ಗಿನ ಜಾವ ಎದ್ದು ಪಟ್ಟಣವನ್ನು ಸ್ವಚ್ಛವಾಗಿಡುವ ಪೌರಕಾರ್ಮಿಕರು ಹಲವು ವರ್ಷಗಳಿಂದ ಗುಡಿಸಲು ಹಾಗೂ ತಾತ್ಕಾಲಿಕ ಕುಟೀರಗಳಲ್ಲಿ ಹಾವು–ಚೇಳುಗಳ ಭಯದ ನಡುವೆ ಜೀವನ ಸಾಗಿಸುತ್ತಿದ್ದಾರೆ. ಇಂತಹ ಕಾರ್ಮಿಕರಿಗೆ ಸುರಕ್ಷಿತ ಮತ್ತು ಶಾಶ್ವತ ವಸತಿ ಕಲ್ಪಿಸುವುದು ಸರ್ಕಾರ ಹಾಗೂ ಜನಪ್ರತಿನಿಧಿಗಳ ಆದ್ಯ ಕರ್ತವ್ಯವೆಂದು ಅಭಿಪ್ರಾಯಪಟ್ಟರು.

ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಒಟ್ಟು 63 ಮನೆಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು, ಕಾಮಗಾರಿ ವಿಳಂಬವಾಗುತ್ತಿದ್ದ ಹಿನ್ನಲೆಯಲ್ಲಿ ಕೆಲ ಪೌರಕಾರ್ಮಿಕರು ತಮ್ಮ ಪಾಲಿನ ಮನೆಗಳನ್ನು ಸ್ವಂತ ಖರ್ಚಿನಲ್ಲಿ ಪೂರ್ಣಗೊಳಿಸಿ ಈಗಾಗಲೇ ವಾಸವಾಗಿದ್ದಾರೆ ಎಂದು ತಿಳಿಸಿದರು. ಇನ್ನೂ ಅನೇಕ ಪೌರಕಾರ್ಮಿಕರು ಕೌಡಳ್ಳಿ ಸಮೀಪದ ಗುಡಿಸಲು ಪ್ರದೇಶ ಗಳಲ್ಲಿ ವಾಸಿಸುತ್ತಿದ್ದು, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಎಲ್ಲರಿಗೂ ವಸತಿ ಸೌಲಭ್ಯ ಕಲ್ಪಿಸಲು ಪ್ರಯತ್ನಿಸಲಾಗುವುದೆಂದು ಹೇಳಿದರು.

ಪೌರಕಾರ್ಮಿಕರ ಮುಖಂಡ ಪಳನಿ, ಕೊಳಚೆ ನಿರ್ಮೂಲನಾ ಮಂಡಳಿ ಇಂಜಿನೀಯರ್ ಜ್ಯೋತ್ಸ್ನಾ ಹಾಗೂ ಗುತ್ತಿಗೆದಾರ ಪವನ್ ಉಪಸ್ಥಿತರಿದ್ದರು.

## ಅಂತಾರಾಷ್ಟ್ರೀಯ ವಿಮಾನ ಸೇವೆ ಸ್ಥಗಿತಗೊಳಿಸಿದ ಏರ್ ಇಂಡಿಯಾ

**ನವದೆಹಲಿ:** ವಿಮಾನ ಇಂಧನ ದರ ಏರಿಕೆ ಮತ್ತು ಕೆಲವು ಪ್ರದೇಶಗಳ ಮೇಲೆ ವಿಧಿಸಲಾ ಗಿರುವ ವೈಮಾನಿಕ ವಲಯದ ನಿರ್ಬಂಧಗಳನ್ನು ಉಲ್ಲೇಖಿಸಿರುವ ಏರ್ ಇಂಡಿಯಾ ಸಂಸ್ಥೆಯು, ಜೂನ್‌ನಿಂದ ಆಗಸ್ಟ್ ವರೆಗೆ ಹಲವು ಅಂತರರಾಷ್ಟ್ರೀಯ ಮಾರ್ಗಗಳಲ್ಲಿ ತನ್ನ ಸೇವೆಯನ್ನು ತಾತ್ಕಾಲಿಕವಾಗಿ ಕಡಿತಗೊಳಿಸುವುದಾಗಿ ಘೋಷಿಸಿದೆ.

ಕಾರ್ಯಾಚರಣೆ ಸ್ಥಿರತೆಯನ್ನು ಸುಧಾರಿಸುವುದು ಮತ್ತು ಪ್ರಯಾಣಿಕರಿಗೆ ಕೊನೆಯ ಕ್ಷಣದಲ್ಲಿ ಆಗುವ ಅನಾನುಕೂಲತೆಯನ್ನು ತಪ್ಪಿಸುವುದು ಈ ಕ್ರಮದ ಉದ್ದೇಶವಾಗಿದೆ ಎಂದು ಏರ್ ಇಂಡಿಯಾ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಟಾಟಾ ಸಮೂಹದ ಏರ್ ಇಂಡಿಯಾ ಸಂಸ್ಥೆಯು, ವಿಮಾನಗಳ ಸಂಖ್ಯೆ ಕಡಿತದ ಹೊರ ತಾಗಿಯೂ ಐದು ಖಂಡಗಳಾದ್ಯಂತ ಸಂಪರ್ಕವನ್ನು ಕಾಯ್ದುಕೊಳ್ಳಲಿದ್ದು, ಪ್ರತಿ ತಿಂಗಳು 1,200ಕ್ಕೂ ಹೆಚ್ಚು ಅಂತರ ರಾಷ್ಟ್ರೀಯ ವಿಮಾನಗಳನ್ನು ಚಲಾಯಿಸುವುದಾಗಿ ಹೇಳಿದೆ.

## ದಾಸರಕೊಪ್ಪಲಿನಲ್ಲಿ ಚರಂಡಿ, ರಸ್ತೆ ಕಾಮಗಾರಿಗೆ ಭೂಮಿಪೂಜೆ



• ಪ್ರಜೋದಯ ವರದಿ

**ಹಾಸನ:** ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದಾಸರಕೊಪ್ಪಲು ಗ್ರಾಮದಲ್ಲಿ ಮಹಾನಗರ ಪಾಲಿಕೆಯ 1.33 ಕೋಟಿ ರೂ. ಅನುದಾನದಡಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಬುಧವಾರ ಭೂಮಿಪೂಜೆ ನೆರವೇರಿಸಿದರು.

ಗ್ರಾಮದಲ್ಲಿ ರಸ್ತೆ ಕಾಮಗಾರಿ ಕೈಗೊಳ್ಳುವಂತೆ ಗ್ರಾಮಸ್ಥರು ಹಲವು ತಿಂಗಳಿಂದ ಬೇಡಿಕೆ ಸಲ್ಲಿಸುತ್ತಿದ್ದರು. ಆ ಹಿನ್ನಲೆಯಲ್ಲಿ ಕ್ರಮ ಕೈಗೊಂಡಿರುವ ಶಾಸಕರು ಅಧಿಕಾರಿ ಹಾಗು ಗ್ರಾಮಸ್ಥರ ಸಮ್ಮುಖದಲ್ಲಿ ಪೂಜೆ ನೆರವೇರಿಸಿದರು. ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡುವಂತೆ ಈ ಸಂದರ್ಭದಲ್ಲಿ ಗುತ್ತಿಗೆದಾರರಿಗೆ ಸೂಚಿಸಿದರು.

ಪಕ್ಷದ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

## ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ಧರಿಸಬಹುದು

• ಪ್ರಜೋದಯ ವರದಿ

**ಬೆಂಗಳೂರು:** ಜನಿವಾರ ಮತ್ತು ಹಿಜಾಬ್ ಸೇರಿ ಧಾರ್ಮಿಕ ಪದ್ಧತಿಗೆ ಅನುಗುಣವಾದ ವಸ್ತ್ರ ಧರಿಸಲು ರಾಜ್ಯ ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ. ಸಮವಸ್ತ್ರ ವಿಚಾರವಾಗಿ 2022ರ ಆದೇಶ ಹಿಂಪಡೆದು ಹೊಸ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅಡಿಯಲ್ಲಿ ಹೊರಡಿಸಲಾದ ಹೊಸ ಸರ್ಕಾರಿ ಆದೇಶದಲ್ಲಿ ಮೇ 13 ರಂದು ರಾಜ್ಯವು ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಜನಿವಾರ, ಪವಿತ್ರ ದಾರ, ಶಿವದಾರ, ರುದ್ರಾಕ್ಷಿ, ಪೇಟ ಅಥವಾ ಟರ್ಬನ್, ತಲೆ ವಸ್ತ್ರ ಅಥವಾ ಹಿಜಾಬ್ ಇತರ ಯಾವುದೇ ಸ್ವರೂಪದ ಸಾಂಪ್ರದಾಯಿಕ ಸಂಕೇತವನ್ನು ನಿಗದಿಪಡಿಸಲಾದ ಸಮವಸ್ತ್ರ ಜೊತೆಗೆ ಧರಿಸಬಹುದು. ಸಾಂಪ್ರದಾಯಿಕ ಮತ್ತು ಪದ್ಧತಿ ಆಧಾರಿತ ಸಂಕೇತ ಸಮವಸ್ತ್ರಕ್ಕೆ ಪೂರಕವಾಗಿರಬೇಕು. ಸಮವಸ್ತ್ರ ಬದಲಿಸುವ, ಮಾರ್ಪಡಿಸುವ ಅಥವಾ ವಿಫಲಗೊಳಿಸುವಂತಿರಬಾರದೆಂದು ಹೇಳಲಾಗಿದೆ.





ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಪ್ರತಿಕ್ರಿಯಿಸಿ, ಯಾವುದೇ ವಿದ್ಯಾರ್ಥಿಯು ಅಂತಹ ಅನುಮತಿಸಲಾದ ಚಿಹ್ನೆಗಳನ್ನು ಧರಿಸಿದ್ದಕ್ಕಾಗಿ ತರಗತಿ ಕೊಠಡಿ, ಪರೀಕ್ಷಾ ಸಭಾಂಗಣಗಳು ಅಥವಾ ಶೈಕ್ಷಣಿಕ ಚಟುವಟಿಕೆಗಳಿಗೆ ಪ್ರವೇಶ ನಿರಾಕರಿಸ ಬಾರದು. ಯಾವುದೇ ವಿದ್ಯಾರ್ಥಿಯನ್ನು ಅಂತಹ ಚಿಹ್ನೆಗಳನ್ನು ಧರಿಸಲು ಅಥವಾ ತೆಗೆದು ಹಾಕಲು ಒತ್ತಾಯಿಸಲಾಗುವುದಿಲ್ಲವೆಂದು ಸ್ಪಷ್ಟಪಡಿಸಿದರು.

ಉಡುಪಿಯಲ್ಲಿ ಶುರುವಾದ ವಿದ್ಯಾರ್ಥಿಗಳ ಹಿಜಾಬ್ ಹಾಗು ಕೇಸರಿ ಶಾಲು ವಿವಾದ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಈ ಹಿನ್ನಲೆಯಲ್ಲಿ 2022ರಲ್ಲಿ ಬಿಜೆಪಿ ಸರ್ಕಾರ ಹೊರಡಿಸಿದ್ದ ಶಾಲಾ-ಕಾಲೇಜುಗಳಲ್ಲಿ ಸಮವಸ್ತ್ರ ಧರಿಸುವ ಕುರಿತ ಆದೇಶವನ್ನು ಸಿದ್ದರಾಮಯ್ಯ ಸರ್ಕಾರ ಹಿಂಪಡೆದಿದೆ. ಬಿಜೆಪಿ ಸರ್ಕಾರ ಹೊರಡಿಸಿದ್ದ ಆದೇಶದ ಮೂಲಕ ಹಿಜಾಬ್ ಧರಿಸಲು ಅವಕಾಶ ನಿರಾಕರಿಸಲಾಗಿತ್ತು. ಇದೀಗ ಆ ಆದೇಶವನ್ನು ವಾಪಾಸ್ ಪಡೆಯಲಾಗಿದೆ.

## ಮೇ20ರಿಂದ ರುದ್ರಪಟ್ಟಣದಲ್ಲಿ ಸಂಗೀತೋತ್ಸವ

• ಪ್ರಜೋದಯ ವರದಿ

**ರಾಮನಾಥಪುರ:** ಸಂಗೀತ ಗ್ರಾಮ ರುದ್ರ ಪಟ್ಟಣದಲ್ಲಿ 23ನೇ ವಾರ್ಷಿಕ ಸಂಗೀತೋತ್ಸವ ಮೇ 20ರಿಂದ ಮೇ 24ರ ವರೆಗೆ ಗ್ರಾಮದ ರಾಮ ಮಂದಿರದಲ್ಲಿ ನಡೆಯಲಿದೆ ಎಂದು ರುದ್ರಪಟ್ಟಣ ಸಂಗೀತೋತ್ಸವ ಟ್ರಸ್ಟ್ ಅಧ್ಯಕ್ಷ ಹಾಗು ಸಂಗೀತ ವಿದ್ವಾಂಸ ಆರ್.ಕೆ.ಪದ್ಮನಾಭ ಅವರು ತಿಳಿಸಿದ್ದಾರೆ.

ಹೋಬಳಿ ವ್ಯಾಪ್ತಿಯ ರುದ್ರಪಟ್ಟಣದ ರಾಮ ಮಂದಿರದಲ್ಲಿ ನಡೆಯಲಿರುವ ಈ ಐದು ದಿನಗಳ ಸಂಗೀತೋತ್ಸವವು ಶಾಸ್ತ್ರೀಯ ಸಂಗೀತ, ನೃತ್ಯ ಹಾಗು ವಾದ್ಯ ವೈಭವಕ್ಕೆ ಸಾಕ್ಷಿಯಾ ಗಲಿದೆ. ಮೇ20ರಂದು ಬೆಳಿಗ್ಗೆ 10ಕ್ಕೆ ಕಾರ್ಯಕ್ರಮ ಉದ್ಘಾಟನೆ ನಡೆಯಲಿದೆ. ನಂತರ 10.15ಕ್ಕೆ ರಶ್ಮಿ ಹರಿ ಪ್ರಸಾದ್ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ. 10.45ಕ್ಕೆ ಬಿ.ಕೆ.ಅತ್ರಿಕೌಶಿಕ್ ಅವರಿಂದ ತ್ಯಾಗರಾಜ ವಿರಚಿತ ಪ್ರಹ್ಲಾದ ವಿಜಯ ಗೇಯ ನಾಟಕ ಕುರಿತು ಪ್ರವಚನ ನಡೆಯಲಿದೆ. ಬೆಳಿಗ್ಗೆ 11ರಿಂದ ಮಧ್ಯಾಹ್ನ 1.15ರ ವರೆಗೆ ಯುವ ಕಲಾವಿದರಿಂದ ವೈವಿಧ್ಯಮಯ ಸಂಗೀತ ಮತ್ತು ನೃತ್ಯ ಕಾರ್ಯಕ್ರಮ ನಡೆಯಲಿವೆ. ಮಧ್ಯಾಹ್ನ ಹಾಗೂ ಸಂಜೆ ವೇಳೆಯಲ್ಲಿಯೂ ಹಲವು ಖ್ಯಾತ ಕಲಾವಿದರಿಂದಸಂಗೀತಕಾರ್ಯಕ್ರಮಮುಂದುವರಿಯಲಿವೆ.





ಮೇ21ರಂದು ವಿದ್ವಾನ್ ಟಿ.ಎಸ್.ಪಟ್ಟಾಭಿರಾಮ ಪಂಡಿತ್ ಅವರಿಂದ ಶಾಸ್ತ್ರೀಯ ಸಂಗೀತ ಗಾಯನ ನಡೆಯಲಿದೆ. ಮಧ್ಯಾಹ್ನ ಹಾಗು ಸಂಜೆ ಸೆಷನ್‌ಗಳಲ್ಲಿ ವಿವಿಧ ಕಲಾವಿದರಿಂದ ವೈವಿಧ್ಯಮಯ ಸಂಗೀತ ಪ್ರದರ್ಶನಗಳು ನಡೆಯಲಿವೆ. ಸಂಜೆ 6.30ಕ್ಕೆ ಖ್ಯಾತ ವಿದ್ವಾಂಸರ ಪಿಟೀಲು ತ್ರಯದ ವಿಶೇಷ ಕಾರ್ಯಕ್ರಮ ಆಕರ್ಷಣೆಯಾಗಲಿದೆ.

ಮೇ 22ರಂದು ವಿದ್ವಾನ್ ಮಹಾರಾಜಪುರಂ ಎಸ್.ಗಣೇಶ್ ವಿಶ್ವನಾಥನ್ ಅವರ ಗಾಯನ, ಕಲಾಂಬಿಕಾ ಸಹೋದರಿಯರ ಯುಗಳ ಗಾಯನ ಸೇರಿದಂತೆ ಹಲವು ಕಾರ್ಯಕ್ರಮಗಳು ನಡೆಯಲಿವೆ. ಸಂಜೆ ಸೆಷನ್‌ಗಳಲ್ಲಿ ಯುವ ಹಾಗೂ ಹಿರಿಯ ಕಲಾವಿದರಿಂದ ಸಂಗೀತ ಸಿಂಚನ ನಡೆಯಲಿದೆ.

ಮೇ 23ರಂದು ವಿದ್ವಾನ್ ಎ.ಎಸ್.ಮುರಳಿ ಅವರ ಗಾಯನ, ಹಾಸ್ಯ ಸಿಂಚನ ಕಾರ್ಯಕ್ರಮ ಹಾಗೂ ಸಂಜೆ ಸಭಾ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ''ಜಗದಾನಂದಕಾರಕ'' ಮತ್ತು ''ಎಂದರೋ ಮಹಾನುಬಾವುಲು'' ಕೃತಿಗಳ ಗೋಷ್ಠಿ ಗಾಯನ ಪ್ರಮುಖ ಆಕರ್ಷಣೆ ಯಾಗಲಿದೆ. ಈ ವೇಳೆ ಸಂಗೀತ ಕಲಾರತ್ನ ಹಾಗೂ ಮೃದಂಗ ವಿದ್ವಾಂಸ ಎ.ವಿ.ಆನಂದ್ ಅವರಿಗೆ ನಾಚಾರಮ್ಮ ಪ್ರಶಸ್ತಿ ಮತ್ತು ಲಯಕಲಾ ಸ್ಪರ್ಶಮಣಿ ಬಿರುದು ಪ್ರದಾನ ಮಾಡಲಾಗುವುದು.

ಮೇ 24ರಂದು ಬೆಳಿಗ್ಗೆ 9ಕ್ಕೆ ರಥೋತ್ಸವ ಹಾಗೂ ನಾಮಸಂಕೀರ್ತನೆ ನಡೆಯಲಿದೆ. ನಂತರ ವಿದ್ವಾನ್ ಡಾ.ಮೈಸೂರು ಎಂ.ಮಂಜುನಾಥ್ ಮತ್ತು ಕು. ಮಾಳವಿ ಮಂಜುನಾಥ್ ಅವರಿಂದ ಯುಗಳ ಪಿಟೀಲು ವಾದನ ನಡೆಯಲಿದೆ. ಈ ಐದು ದಿನಗಳ ಸಂಗೀತೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಂಗೀತಾ ಪ್ರಿಯರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸಾರ್ವಜನಿಕರು ಸಹಕರಿಸಬೇಕೆಂದು ವಿದ್ವಾನ್ ಮನವಿ ಮಾಡಿದ್ದಾರೆ.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

ಹಾಸನ: ಜಿಲ್ಲಾ ಸರ್ಕಾರಿ, ಅರೆ ಸರ್ಕಾರಿ ಹಾಗು ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೀಡಲಾಗುವ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ಸರ್ಕಾರಿ, ಅರೆ ಸರ್ಕಾರಿ, ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಹಾಗೂ ಹಾಸನ ಜಿಲ್ಲಾ ಸರ್ಕಾರಿ ನೌಕರರ ಕೋ–ಆಪರೇಟಿವ್ ಸೊಸೈಟಿ ಈ ಎರಡೂ ಸಂಘಗಳ ಸದಸ್ಯತ್ವ ಹೊಂದಿರುವ ಸದಸ್ಯರ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿ ಗಳು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಮೇ 25 ಕೊನೆಯ ದಿನವೆಂದು ಸಂಘದ ಅಧ್ಯಕ್ಷ ಕೆ.ಎಂ. ಶ್ರೀನಿವಾಸ್ ಅವರು ತಿಳಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172–231188, ಮೊ: 9449203019